19 F144

7603

293

కౌసల్యాపరిణయం

O,33,2 IYA K
N12
293

Digitized by ROJA MUTHIAH RESEARCH LIBRARY

ಸರಸ್ವತೀಭಂಡಾರ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಪುಸ್ತಕದ ಹೆಸರು ಕೌಸಲ್ಯಾ ಪರಿಣಯ
ಪುಸ್ತಕದ ಜಂಜರು ನಂಬರ್ 293 ಬೆಲೆ : 0=13

A — 293

7603

ಕನ್ನಡ ಸಾಹಿತ್ಯ ಪರಿಷತ್ತು
ಕ್ರ. ಸಂಖ್ಯೆ 7603 ವ. ಸಂಖ್ಯೆ
ದಿನಾಂಕ

Digitized by ROJA MUTHIAH RESEARCH LIBRARY

7603

( ವಾಗ್ಭೂಷಣ ಗ್ರಂಥಮಾಲೆಯ ೫೫ ನೇ ಪುಸ್ತಕ. )

# ಕೌಸಲ್ಯಾಪರಿಣಯಂ.

ಇದನ್ನು

ಕೆ. ರಾಮಸ್ವಾಮಿ ಅಯ್ಯಂಗಾರ

ಹೆಡ್‍ಮಾಸ್ತರ ಮಾಗಡಿಸ್ಕೂಲ

ಇವರು ಬರೆದರು.

---

೧ ನೇ ಆವೃತ್ತಿ ೧೫೦೦ ಪ್ರತಿಗಳು.

---

ಧಾರವಾಡ.

ಇದರ ಸ್ವಾಮಿತ್ವವು ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಒಳಪಟ್ಟಿರುವದು.

Printed At the "SHRI MAHAVIR PRESS" BELGAUM
*by Mr. D. P. Chaugule*
& Published by the "K. V. V. Sangha" DHARWAR.

ಸನ್ನ ೧೯೧೨.

ಕ್ರಯ ೨ ಆಣೆ.

ಸರಸ್ವತೀ ಭಂಡಾರ
ಪರಿಷತ್ತು
ಕಾದಂಬರಿ. ಪೌ ೧೬
ಕ್ರ. ಸಂ ೬೮೮

Digitized by ROJA MUTHIAH RESEARCH LIBRARY

ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 293 ವರ್ಗ ಸಂಖ್ಯೆ ಜ31
ತಾರೀಖು
ಬೆಲೆ
O, 33, 2 IYA K N12
293
BANGALORE.
KARNATAKA SAHITYA PARISHAT
7603

# ಕೌಸಲ್ಯಾಪರಿಣಯಂ.

## ೧ ನೆಯ ಪ್ರಕರಣ.

ಕಂ॥ ರಾಮಂ ರಾಕ್ಷಸವಂಶವಿ।
ರಾಮಂ ರಣರಂಗಭೀಮನುತ್ತಮನಾಮಂ ॥
ಶ್ಯಾಮಂ ವೈದೇಹಸುತಾ।
ಕಾಮಂ ಕರುಣಿಸುಗೆ ಕಾಮಿತಾರ್ಥವನನಿಶಂ ॥

ಮೋಕ್ಷದಾಯಕವಾದ ಪಟ್ಟಣಗಳಲ್ಲಿ ಯಾವುದು ಮೊದಲನೆಯದೆಂದು ಹೆಸರುಗೊಂಡಿದೆಯೋ, ಯಾವುದು ಭೂಲೋಕ ವೈಕುಂಠವೆಂದು ಪ್ರಖ್ಯಾತಿಪಡೆದಿದೆಯೋ, ಯಾವುದನ್ನು ಎಷ್ಟಾವೃತ್ತಿ ನೋಡಿದರೂ ಮತ್ತೊಮ್ಮೆ ನೋಡಬೇಕೆಂಬ ಆಶೆಯನ್ನು ಹುಟ್ಟಿಸುತ್ತಿರುವುದೋ, ಅಂತಹ ಅಯೋಧ್ಯಾಪುರಿಯ ಇತಿಹಾಸವು ಶ್ರೋತವ್ಯವಾದುದಲ್ಲವೇ!

ಶ್ರೀಮನ್ನಾರಾಯಣನು ರಾಕ್ಷಸವಧಾರ್ಥವಾಗಿ ಶ್ರೀರಾಮನಾಮದಿಂದ ಭೂಲೋಕದಲ್ಲಿ ಅವತರಿಸಿ, ದುಷ್ಟಶಿಕ್ಷಣ ಶಿಷ್ಟರಕ್ಷಣಗಳನ್ನು ಮಾಡಿ, ಧರ್ಮಸಂಸ್ಥಾಪನಂಗೆಯ್ದು ತರುವಾಯ ವೈಕುಂಠಕ್ಕೆ ಮರಳಿ ತೆರಳಿದ ತರುವಾಯ ಸರಯೂ ನದಿಯ ನೀರು ಉಕ್ಕಿಬಂದು, ಅಯೋಧ್ಯಾಪಟ್ಟಣವನ್ನು ಮುಳುಗಿಸಿ ಬಿಟ್ಟಿತೆಂಬ ವಿಷಯವನ್ನು ರಾಮಾಯಣದ ಕಥೆಯನ್ನು ಕೇಳಿದವರೆಲ್ಲರೂ ತಿಳಿದಿರಬಹುದು. ಆ ಪುರವು ಜಲಮಯವಾಗಿ ಹೋಗಿ ಬಹುಕಾಲ ಕಳೆದುಹೋದುದರಿಂದ ಅದರ ಗುರುತು ಸುದಾ ಯಾರಿಗೂ ಸಿಕ್ಕಲು ಅವಕಾಶವಿಲ್ಲದೆ ಹೋಯಿತು. ಕ್ರಿಸ್ತನು ಹುಟ್ಟಲಿಕ್ಕೆ ಅರ್ಧ ಶತಮಾನದಪೂರ್ವದಲ್ಲಿ ಉಜ್ಜಯಿನೀ ಪಟ್ಟಣವನ್ನಾಳುತಿದ್ದ ವಿಕ್ರಮಾದಿತ್ಯರಾಯನು ತೀರ್ಥಯಾತ್ರಾಪರನಾಗಿ, ದೇಶಸಂಚಾರ ಮಾಡುತ್ತಾ, ಈ ಅಯೋಧ್ಯೆಯನ್ನು ನೋಡಬೇಕೆಂದು ಬರಲಾಗಿ, ಶಾಸ್ತ್ರಬೋಧಿತವಾದ ಸ್ಥಳವೆಲ್ಲವೂ ಜಲಮಯವಾಗಿದ್ದಿತು. ಇದನ್ನು ಕಂಡು ಆ ರಾಜನು ಚಿಂತಾಕುಲಿತ ಹೃದಯನಾಗಿ, "ಅಯ್ಯೋ? ಇಂತಹ ಸುಕ್ಷೇತ್ರವು ಈ ಭೂಮಿಯಲ್ಲಿ ಕಾಣದೆ ಹೋಗಬಹುದೇ? ಜನಗಳ ಪಾಪಪರಿಹಾರ ಮಾಡತಕ್ಕ ಈ ಸುಕ್ಷೇತ್ರವನ್ನು ಕಂಡುಹಿಡಿಯಬೇಕು." ಎಂದು ಸಂಕಲ್ಪಿಸಿ, ನಿಯಮದಿಂದ ಬಹುಕಾಲದ ತನಕ ಶ್ರೀಮನ್ನಾರಾಯಣನನ್ನು ಕುರಿತು ತಪವಂಗೆಯ್ದನು. ಆಗಲಾ ಕರುಣಾಮೂರ್ತಿಯು ಪ್ರತ್ಯಕ್ಷನಾಗಿ ಇದಿರಿನಲ್ಲಿ

Digitized by ROJA MUTHIAH RESEARCH LIBRARY

ನಿಂದು "ಎಲೈ ಧೀರನೇ! ನಿನ್ನ ತಪಸ್ಸಿಗೆ ಮೆಚ್ಚಿದೆನು. ನಿನ್ನ ಅಭೀಷ್ಟವನ್ನು ಬೇಡು." ಎಂದು ನಿಯಮಿಸಲಾ ಮಹೀರಮಣನು ಕೈಮುಗಿದು, "ಜಗದೊಡೆಯಾ! ಬೇಡಿದರ ಬಯಕೆಗಳನ್ನು ಸಲ್ಲಿಸುವ ಬಿರುದನ್ನು ಕಾಪಾಡುವದರಲ್ಲಿ ನಿನಗೆಣೆಯಪ್ಪ ದೈವಮುಂಟೇ? ರಾಮಾವತಾರದ ದಿನಗಳಲ್ಲಿ ಅಯೋಧ್ಯೆಯು ಹೋಗಿದ್ದಿತೆಂಬುದನ್ನು ಜನರು ಯಾವಾಗಲೂ ನೋಡಿ, ಪಾಪವನ್ನು ಕಳೆದುಕೊಳ್ಳಲು ಅನುಕೂಲಿಸುವಂತೆ ಅನುಗ್ರಹಿಸಬೇಕೆಂಬುದೇ ಈ ದೀನನ ಪ್ರಾರ್ಥನೆ. ನನ್ನೊಬ್ಬನ ಪ್ರಯೋಜನಕ್ಕಾಗಿ ಯಾವುದನ್ನೂ ಬೇಡಲು ಇಚ್ಛಯಿಸೆನು. ಜನರೆಲ್ಲರೂ ಮರೆಯದೆ ನಿನ್ನ ಕಥೆಗಳನ್ನು ಕೇಳಿ, ಶ್ರವಣೇಂದ್ರಿಯವನ್ನು ಪಾವನಂಗೊಳಿಸುವಂತೆ, ನಿನ್ನ ವಿಹಾರ ಸ್ಥಲಗಳಂ ನೋಡಿ ನೇತ್ರೇಂದ್ರಿಯವನ್ನು ಸಫಲಗೊಳಿಸುವ ಹಾಗೆ ಅನುಗ್ರಹಿಸಬೇಕು." ಎಂದು ಬೇಡಿಕೊಂಡನು.

ಆಗಲಾ ಲೋಕನಾಯಕನು "ಎಲೈ ರಾಜೇಂದ್ರನೇ? ನಿನ್ನ ಈ ಕೋರಿಕೆಯು ಈ ಕಲಿಯುಗದಲ್ಲಿ ಅಸಾಧ್ಯವಾದುದರಿಂದ ಈ ಪ್ರಯತ್ನವನುಳಿದು ಮತ್ತಾವುದನ್ನಾದರೂ ಕೇಳಿಕೋ, ಅಗತ್ಯವಾಗಿ ಕೊಡುವೆನು." ಎಂದೆನಲಾ ವಿಕ್ರಮಾದಿತ್ಯನು ಮರಳಿ ಕೈಮುಗಿದು, "ಮಹಾಸ್ವಾಮಿ! ನನ್ನ ಸಂಕಲ್ಪವನ್ನು ನೀನರಿಯದವನಲ್ಲ. ಆರಬ್ಧಮುತ್ತಮಗುಣಾನಪರಿತ್ಯಜಂತಿ" ಎಂಬ ಗಾದೆಯು ನನ್ನ ನೆನಪಿನಲ್ಲಿಯೇ ಇದೆ. ತಮ್ಮ ಸನ್ನಿಧಿಯಲ್ಲಿ ನನ್ನ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳಲು, ಪ್ರಾಣಗಳನ್ನಾದರೂ ಒಪ್ಪಿಸುವೆನೇ ಹೊರತು ನನ್ನ ಕೋರಿಕೆಯನ್ನು ಹಿಂದಿರುಗಿಸಲಾರೆನು. ಇದರಿಂದ ಎಷ್ಟು ಸಂಕಟಗಳು ಬರುವುದಾಗಿದ್ದರೂ ಸಹಿಸುವೆನು; ದಯಮಾಡಿ ಕರುಣಿಸಬೇಕು." ಎಂದು ಬೇಡಿಕೊಂಡನು. ಆಗಲಾ ಮಾತಿಗೆ ಶ್ರೀ ರಾಮಚಂದ್ರನು ಮುಗುಳ್ನಗೆ ನಕ್ಕು "ಎಲೈ ಸ್ಥಿರಸಂಕಲ್ಪನೇ! ಇದಕ್ಕಷ್ಟು ಸಾಹಸವೇಕೆ? ನೀನು ಯಾವ ಯಾವ ಸ್ಥಳಗಳನ್ನು ನೋಡಬೇಕೆಂದು ಅಪೇಕ್ಷಿಸುವೆಯೋ ಅಂತಹ ಪ್ರದೇಶಗಳು ಕಾಣಬರುವಂತೆ ಅನುಗ್ರಹಿಸುವೆನು. ಬೇಡಬಹುದು" ಎನಲಾ ವಿಕ್ರಮನು ಕೆಲವು ಸ್ಥಳಗಳನ್ನು ನೋಡಲಪೇಕ್ಷಿಸಿದನು. ಅವು ಯಾವುವೆಂದರೆ:—

(೧) ಕೈಕಯೆಯ ರೋಷಾಗಾರ, (೨) ಶ್ರೀ ರಾಮನ ಜನನಸ್ಥಳ, (೩) ಕಾಂಚನ ಸೀತಾ ವಿಗ್ರಹ, (೪) ಗೋಪ್ರಕಾರವೆಂಬ ರಾಮನಿರ್ಯಾಣ ಘಟ್ಟ, (೫) ಹನುಮಂತನ ಗಡಿ, (೬) ನಾಗೇಶ್ವರಾಲಯ.

ಈ ಪ್ರದೇಶಗಳು ಸರ್ವದಾ ಕಾಣುತ್ತಿರುವುವೆಂದು ಅನುಗ್ರಹಿಸಿ, ಶ್ರೀ ರಾಮಚಂದ್ರನು ಅಂತರ್ಧಾನನಾದನು. ಇವು ವಿಕ್ರಮಾದಿತ್ಯನ ಯಶಸ್ತಂಭಗಳಂತೆ ಅದ್ಯಾಪಿ ಕಂಗೊಳಿಸುತ್ತಲಿವೆ. ಅಲ್ಲಿಗೆ ಹೋಗಿ ನೋಡುವ ಜನರಲ್ಲಿ ರಾಮನಿರ್ಯಾಣ ಘಟ್ಟವನ್ನು ನೋಡಿ ಕಣ್ಣೀರು ಸುರಿಸದವರೂ, ಕೈಕಯೆಯ ಕೋಪಾಗಾರವನ್ನು ನೋಡಿ,

Digitized by ROJA MUTHIAH RESEARCH LIBRARY



ಅವಳನ್ನು ಬೈಯದೆ ಇರುವವರೂ ಒಬ್ಬರಾದರೂ ಸಿಕ್ಕರು. ಕಾಶೀ ಪಟ್ಟಣದಲ್ಲಿರುವ ಮಣಿಕರ್ಣಿಕಾ ಘಟ್ಟವೂ, ಉಜ್ಜಯಿನಿಯಲ್ಲಿ ಮಹಾಕಾಳೇಶ್ವರನ ಆಲಯವೂ, ನೈಮಿಶಾರಣ್ಯದಲ್ಲಿನ ಚಕ್ರಸರೋವರವೂ ಹೇಗೆ ಪ್ರಖ್ಯಾತಿಯನ್ನು ಪಡೆದಿರುವುವೊ ಹಾಗೆಯೇ ಅಯೋಧ್ಯೆಯ ತೀರ್ಥಗಳಲ್ಲಿ ಗೋಪ್ರಕಾರ ಸ್ಥಳವು ಉತ್ತಮೋತ್ತಮವೆನಿಸಿಕೊಂಡಿರುವುದು. ಕಾಂಚನ ಸೀತಾವಿಗ್ರಹವನ್ನು ರಾತ್ರಿಯ ಕಾಲದಲ್ಲಿ ನೋಡಬಹುದೇ ಹೊರತು ಹಗಲು ಹೊತ್ತಿನಲ್ಲಿ ನೋಡಲಾಗದು. ಆ ಜಗನ್ಮಾತೆಯನ್ನು ನೋಡಬೇಕಾಗಿದ್ದರೆ ಸಾವಿರ ಕಣ್ಣುಗಳಾದರೂ ಸಾಲವು. ಹನುಮಂತನ ಗಡಿಯಂತೂ ದಟ್ಟವಾದ ಕಾರಡವಿಯಲ್ಲಿರುವುದು. ಅಲ್ಲಿ ಸ್ಥೂಲಕಾಯದ, ಮೊಂಡುಬಾಲದ, ಭಯಂಕರಾಕೃತಿಯ ಕಪಿಗಳು ಅಸಂಖ್ಯಾತಗಳಾಗಿರುವುವು. ಜನರು ಭಕ್ತಿಯಿಂದಲಾಗಲಿ, ವಿನೋದದಿಂದಲಾಗಲಿ, ಹಂಡೆಗಳಲ್ಲಿ ಪಾಯಸವನ್ನು ತುಂಬಿ ಅಲ್ಲಿಟ್ಟರೆ ಅವು ಪಾತ್ರೆಯನ್ನೇ ಹೊತ್ತುಕೊಂಡು ಓಡಿಹೋಗುವ ರೀತಿಯನ್ನು ನೋಡಿದರೆ ಪರಮಾಶ್ಚರ್ಯವಾಗಿ ಕಾಣುವುದು. ಶ್ರೀರಾಮನ ಜನನಗೃಹವನ್ನು ನೋಡಿದ ಇತರ ಸೂತಿಕಾ ಗೃಹಗಳನ್ನು ನೋಡಬೇಕೆಂಬ ಆಸೆಯೇ ಹುಟ್ಟಲಾರದು. ನಾಗೇಶ್ವರಾಲಯವು ನಗರಿಯ ಮಧ್ಯಭಾಗದಲ್ಲಿ ರತ್ನಪದಕದಂತೆ ಕಂಗೊಳಿಸುತ್ತಿರುವುದು. ಈ ದೇವರೇ ಸೂರ್ಯವಂಶದ ಅರಸುಗಳ ಕುಲಧನವೆಂತಲೂ, ಗೃಹದೇವರೆಂತಲೂ ಹೆಸರುಗೊಂಡಿರುವುದು. ಈಗ ಭಗವದನುಗ್ರಹದಿಂದ ಲೋಕಕ್ಕೆ ಕಾಣುತ್ತಿರುವ ಈ ಪ್ರದೇಶಗಳು ಮಾತ್ರವೇ ಎಷ್ಟೋ ಆಶ್ಚರ್ಯಜನಕಗಳಾಗಿ ತೋರುತ್ತಿರುವಲ್ಲಿ, ಪೂರ್ವಕಾಲದ ಅಯೋಧ್ಯಾ ಪಟ್ಟಣವೇ ಲೋಚನ ಗೋಚರವಾಗುವಂತೆ ಇದ್ದರೆ, ಅದನ್ನು ನೋಡಿದ ಜನರು ಆ ಸ್ಥಾನವನ್ನು ಬಿಟ್ಟು ಎಂದೆಂದಿಗೂ ಈಚೆಗೆ ಬರಲಿಕ್ಕೆ ಇಚ್ಛಯಿಸಲಾರರೆಂದು ಧಾರಾಳವಾಗಿ ಹೇಳಬಹುದು.

## ೨ ನೆಯ ಪ್ರಕರಣ.

ಹಿಂದಿನ ತ್ರೇತಾಯುಗದಲ್ಲಿ ವೈರಿಗಳು ಹೊಂಗಲಶಕ್ಯವೆಂದು ನೆಗಳ್ತೆಗೊಂಡಿದ್ದ ಅಯೋಧ್ಯಾದೇಶಕ್ಕೆ ಕೋಸಲಪುರಿಯೆಂಬುದು ರಾಜಧಾನಿಯೆನಿಸಿಕೊಂಡಿತ್ತು. ಸೂರ್ಯವಂಶಾವತಂಸನಾದ ರಘುವೆಂಬ ರಾಜನ್ಯನು ಆ ರಾಜ್ಯವನ್ನು ಪಾಲಿಸುತಿದ್ದನು. ಒಂದಾನೊಂದುದಿನ ಆತನು ಮಂತ್ರಿಸಾಮತ ಪುರೋಹಿತ ಸೇನಾನೀ ಸಮೇತನಾಗಿ ಒಡ್ಡೋಲಗಂಗೊಟ್ಟಿರ್ಪ ಸಮಯದಲ್ಲಿ ಒಬ್ಬ ದ್ವಾರಪಾಲಕನು ಸಂಭ್ರಮದಿಂದ ಓಡಿಬಂದು, "ದೇವಾ! ವಿದರ್ಭಪುರದ ಅರಸನಿಂದ ಕಳುಹಲ್ಪಟ್ಟ ಪುರೋಹಿತರು ತಮ್ಮ ದರ್ಶನಕ್ಕಾಗಿ ಬಂದು ಬಾಗಿಲಲ್ಲಿ ಕಾದಿರುವರು." ಎಂದು ಬಿನ್ನವಿ

ಸಲಾರಾಯನು ಕೈಸ್ಸೆಗೆಯಿಂದ ಒಳಕ್ಕೆ ಕರೆತರುವುದೆಂದು ನಿರೂಪಿಸಲವನು ಅವರನ್ನು ಒಳಕ್ಕೆ ಕರೆದುತಂದನು. ರಾಯನು ಅವರಿಗೆ ನಮಸ್ಕರಿಸಿ, ಸಮುಚಿತಾಸನಗಳಲ್ಲಿ ಕುಳ್ಳಿರಿಸಿ, "ಮಹನೀಯರೇ! ವಿದರ್ಭರಾಜನಿಗೆ ಕುಶಲವೆ? ಯಾವ ಕಾರ್ಯಗೌರವದಿಂದ ತಮ್ಮನ್ನು ಇಷ್ಟದೂರ ಕಳುಹಿದನೋ, ಅದನ್ನು ಅನುಗ್ರಹಿಸಬೇಕು." ಎಂದು ವಿನಯದಿಂದ ಕೇಳಲಾಪಾರ್ವರಿಂತೆಂದರು. "ಜೀಯಾ! ಯಾಚಕ ಕಲ್ಪಭೂಜನೆನಿಸಿದ ವಿದರ್ಭರಾಜನಾದ ಭೋಜನು ಕ್ಷೇಮದಲ್ಲಿದ್ದಾನೆ; ನಿಮ್ಮ ಕ್ಷೇಮಸಮಾಚಾರಗಳನ್ನು ತಿಳಿಯಲಪೇಕ್ಷಿಸುತ್ತಾನೆ. ಆತನು ತನ್ನ ತಂಗಿಯಾದ ಇಂದುಮತೀದೇವಿಗೆ ಸ್ವಯಂವರ ಮಹೋತ್ಸವವನ್ನು ನಡೆಯಿಸಲು ಯೋಚಿಸಿರುವನು. ಈ ಉತ್ಸವಕ್ಕಾಗಿ ಬರಬೇಕೆಂದು ಸಮಸ್ತದೇಶದ ಮಹಾರಾಜರುಗಳಿಗೂ ಹೇಳಿ ಕಳುಹಿರುವನು. ಈ ಒಸಗೆಯನ್ನು ತಮ್ಮ ಸನ್ನಿಧಿಯಲ್ಲಿ ಬಿನ್ನವಿಸಿ, ಈ ಶುಭಕಾರ್ಯಕಾರ್ಯಕ್ಕೆ ಆಗತ್ಯವಾಗಿ ದಯಮಾಡಿಸಬೇಕೆಂದು ಅರಿಕೆ ಮಾಡಿರುವನು." ಎಂದು ಹೇಳಲಾರಘು ಮಹಾರಾಯನು ಬಹು ಸಂತೋಷದಿಂದ ತನ್ನ ಒಪ್ಪಿಗೆಯನ್ನು ತಿಳಿಸಿ, ಅವರನ್ನು ಸಮುಚಿತ ಗೌರವಗಳಿಂದ ಸತ್ಕರಿಸಿ, ಕಳುಹಿ, ತನ್ನ ಪಕ್ಕದಲ್ಲಿ ಕುಳಿತುಕೊಂಡು ರಮಾಕುಮಾರನನ್ನೂ, ಮಾಕುಮಾರನನ್ನು ಕುಮಾರನನ್ನೂ ವೇಷಮನೀಷಾಬಲಗಳಿಂದಿಳಿಕೆಯ್ವ ತನ್ನ ಕುಮಾರನಾದ ಅಜಮಹಾರಾಜನನ್ನು ನೋಡಿ, ಮಗುವೇ! ಇಲ್ಲಿಗೆ ಬಂದಿದ್ದ ಪುರೋಹಿತರ ಮಾತನ್ನು ಕೇಳಿದೆಯಾ? ವೀರರಿಗೆ ಪೌರುಷ ಪ್ರದರ್ಶನದ ಕಾಲವು ಇದೇ ಅಲ್ಲವೆ? ನೀನುಸೇನಾಸಮೇತನಾಗಿ ವಿದರ್ಭನಗರಿಗೆ ಹೋಗಿ, ನಿನ್ನ ಭುಜಸಾರವನ್ನು ಲೋಕಕ್ಕೆ ತೋರಿಸಿ, ಆ ನಾರೀಮಣಿಯನ್ನು ಕೋರಿ, ಕರೆತಂದು ತೋರಲಾಪೆಯಾಂ" ಎನಲಾ ಕುಮಾರ ಕಂಠೀರವನು "ಅಪ್ಪಾಜೀ! ಅಪ್ಪಣೆಯಾದರೆ ತಮ್ಮ ಅನುಗ್ರಹ ಬಲದಿಂದ ಕಾರ್ಯಸಾಧನೆಯನ್ನು ಮಾಡಿಕೊಂಡು ಬರುವೆನು." ಎಂದು ವಿಜ್ಞಾಪಿಸಿದನು. ಆಗ ರಘುಮಹಾರಾಯನು ತನ್ನ ಮಗನನ್ನು ಜಯಶಾಲಿಯಾಗೆಂದು ಹರಸಿ, ತಾಂಬೂಲವನ್ನು ಕೊಟ್ಟು ಕಳುಹಿದನು.

ಅಜಮಹಾರಾಜನು ತನ್ನ ತಂದೆಯ ಅಪ್ಪಣೆಯನ್ನು ಪಡೆದು, ಚತುರಂಗಬಲಸಮೇತನಾಗಿ ಹೊರಟು ಮಾರ್ಗಮಧ್ಯದಲ್ಲಿ ನರ್ಮದಾನದಿಯನ್ನು ಕಂಡು, ಅಲ್ಲಿ ಇಳಿದು ಸ್ನಾನಸಂಧ್ಯಾವಂದನಾದ್ಯನುಷ್ಠಾನನಿರತನಾಗಿ ಕುಳಿತಿದ್ದನು. ಅಷ್ಟರಲ್ಲಿ ಅಲ್ಲಿಗೆ ಒಂದು ಮದಗಜವು ಬಂದು, ಇವನ ಸೈನ್ಯದ ಮೇಲೆ ಬಿದ್ದು, ಬೆದರಿಸಿ, ಚದರಿಸಿ, ಕೆಲವರನ್ನು ಪಾದಗಳಿಂದ ತುಳಿಯುತ್ತಾ, ಹಲವರನ್ನು ಸುಂಡಿಲದಿಂದ ಚಿಮ್ಮುತ್ತಾ, ಮತ್ತೆ ಕೆಲವರನ್ನು ಮರದ ದೊಡ್ಡ ರೆಂಬೆಗಳಿಂದ ಇಕ್ಕುತ್ತಾ ಹಲವು ಬಗೆಗಳಿಂದ ತೊಂದರೆಗೊಳಿಸುತ್ತಾ ಇತ್ತು. ಇದರಿಂದ ಸೈನ್ಯದಲ್ಲಿ ಬಹಳ ಕಳವಳವೂ, ಗದ್ದಲವೂ, ಹಾಹಾಕಾರವೂ ಉಂಟಾದುವು.

7603



ಈ ಸುದ್ದಿಯು ಮಹಾರಾಜನ ಕಿವಿಗೆ ಬಿದ್ದುದರಿಂದ ಆತನು ರೋಷಾರುಣ ನೇತ್ರನಾಗಿ, "ಇದರ ಮದವನಡಗಿಸದೆ, ಬೆದರಿ ಓಡಿಹೋದರೆ ಎದೆಗುಂದಿ, ಪದವನ್ನು ತೆಗೆದನೆಂದು ಚದುರರೆಲ್ಲರುಂನಗದೆ ಇರುವರೆ? ಈ ಕ್ಷಣದಲ್ಲಿಯೇ ಇದರ ಸೊಕ್ಕನ್ನು ಮುರಿದೊಕ್ಕಲಿಕ್ಕುವೆನು." ಎಂದು ಥಟ್ಟನೆ ಎದ್ದು, ಅದರಿದಿರಿಗೆ ನಡೆದು, ಅದನ್ನಿರಿಯಲು ಕತ್ತಿಯನ್ನು ಹಿರಿದು ಝಳಪಿಸಿದನು. ಕೂಡಲೇ ಅದು ಭೀ ಎಂದು ಅಬ್ಬರಿಸಿ ಮುಂದೆ ಬಂದುನಿಂದು, ಇವನ ಖಡ್ಗದ ಹೊಳಪಿಗೆ ಹೆದರಿ, ಧೊಪ್ಪನೆ ನೆಲದಲ್ಲಿ ಉರುಳಿ ಮಡಿದು ಬಿದ್ದಿತು. ಅಜಮಹಾರಾಜನು ಇದನ್ನು ಕಂಡು ಆಶ್ಚರ್ಯಚಕಿತನಾಗಿ "ಏನಿದು? ನಾನು ಇದರ ಮೇಲೆ ಶಕ್ತಿಯನ್ನು ಉಪಯೋಗಿಸದೆ ಇದ್ದರೂ ಇದು ಅದರ ಕಾಂತಿಗೇನೇ ಹೆದರಿ ಮಡಿಯಿತಲ್ಲ!" ಎಂದು ಆಲೋಚಿಸುತ್ತಿರುವಲ್ಲಿ ಆ ಆನೆಯ ಕುಂಭಸ್ಥಳದಿಂದ ಒಂದು ತೇಜಸ್ಸು ಹೊರಟು ಬಂತು. ಕಣ್ಣುಗಳನ್ನು ಚುಚ್ಚುತ್ತಿರುವ ಆ ಬೆಳಕನ್ನು ನೋಡಿ ಸೈನಿಕರೆಲ್ಲರೂ ಭ್ರಾಂತರಾಗಿ ಅಚ್ಚರಿಗೊಂಡು ನೋಡುತ್ತಿದ್ದರು. ಆಗ

ನಗೆಮೊಗದಿಂ ನಿಡುಗಣ್ಣಿಂ ।
ಸೊಗಯಿಸಿಪ ಮಣಿಹಾರಕುಂಡಲಾಂಗದದಿಂದಂ ॥
ಬಗೆಗೊಳಿಪಸುಂದರಾಕೃತಿ ।
ಯೊಗೆದಿದಿರೊಳ್ನಿಂದುತೋರ್ದುದಚ್ಚರಿಗುಡುಕಂ ॥

ಒಬ್ಬ ದಿವ್ಯಪುರುಷನು ಕಾಣಿಸಿಕೊಂಡು ಅಜಮಹಾರಾಜನನ್ನು ಕಂಡು, ವಿನಯದಿಂದ ಕೈಮುಗಿದು "ಎಲೈ ಮಹಾಕಾಂತನೇ! ನಾನು ಗಾಯನವಿದ್ಯಾವಿಶಾರದನಾದ ಪ್ರಿಯಂವದನೆಂಬ ಗಂಧರ್ವನು; ನಾನು ಮನಬಂದಂತೆ ಸಂಚರಿಸುತ್ತಾ ಇರುವಾಗ ಒಂದಾನೊಂದು ದಿನ ತಪಸ್ಸು ಮಾಡುತಿದ್ದ ಮತಂಗಋಷಿಯ ಎದೆಯಮೇಲೆ ಅಜ್ಞಾನದಿಂದ ಕಾಲಿಟ್ಟೆನು. ಅದಕ್ಕಾತನು ಕಡುಮುಳಿದು, ನೀನು ಮತ್ತನಾಗಿ ನನ್ನನ್ನು ತುಳಿದ ಕಾರಣ ಭೂಲೋಕದಲ್ಲಿ ಮತ್ತಗಜವಾಗಿ ಜನಿಸೆಂದು ಶಾಪವನ್ನಿತ್ತನು. ಆಗ ನಾನು ಹೆದರಿ, ಆ ಮುನೀಂದ್ರನಿಗೆ ಕೈಮುಗಿದು, "ಮಹಾಸ್ವಾಮಿ! ಮಕ್ಕಳ ಅಪರಾಧಗಳನ್ನು ತಾಯಿತಂದೆಗಳು ಕ್ಷಮಿಸದೆ ಶಿಕ್ಷಿಸುವರೆ? ನಾನು ತಿಳಿಯದೆ ಮಾಡಿದ ಅಪರಾಧಕ್ಕೆ ಇಂತಹ ಕ್ರೂರದಂಡನೆಯೆ? ನನ್ನ ತಪ್ಪನ್ನು ಮನ್ನಿಸಿ ವಿಶಾಪವನನುಗ್ರಹಿಸಬೇಕು." ಎಂದು ದೈನ್ಯದಿಂದ ಬೇಡಿಕೊಂಡೆನು. ಅದಕ್ಕಾ ಮುನಿಯು ಕರುಣಿಸಿ, "ಎಲೈ ಗಂಧರ್ವನೇ! ಮಹಾತ್ಮರ ಬಾಯಿಂದ ವ್ಯರ್ಥವಾದ ನುಡಿಗಳು ಎಂದಿಗೂ ಹೊರಡಲಾರವು. ನೀನು ನರ್ಮದಾತೀರದ ಕಾಡಿನಲ್ಲಿ ಆನೆಯಾಗಿ ಹುಟ್ಟಿ ಕೆಲವು ಕಾಲದ ತನಕ ವಾಸಮಾಡಿಕೊಂಡಿರು. ಮುಂದೆ ಅಯೋಧ್ಯಾಧಿಪತಿಯಾದ ಅಜಮಹಾರಾಯನು ಆ ಮಾರ್ಗವಾಗಿ ಬರುವನು; ಆ ಕಾಲದಲ್ಲಿ ನೀನು ಆತನ

Digitized by ROJA MUTHIAH RESEARCH LIBRARY

ಸೈನ್ಯದ ಮೇಲೆ ಬಿದ್ದು ಗದ್ದಲವೆಬ್ಬಿಸಿದರೆ, ಆತನು ಮುಳಿದು ನಿನ್ನನ್ನು ಕೊಲ್ಲಲು
ಕತ್ತಿಯನೆತ್ತುವನು. ಆಗ ನಿನಗೆ ಶಾಪವಿಮೋಚನವಾಗುವದು." ಎಂದು ಆಪ್ಪಣೆ
ಕೊಟ್ಟನು. ಅಂದಿನಿಂದ ನಿನ್ನ ಆಗಮನವನ್ನೇ ನಿರೀಕ್ಷಿಸಿಕೊಂಡಿದ್ದೆನು. ಮಹರ್ಷಿ
ಯ ವಾಕ್ಯದಂತೆ ಈಗ ನಿನ್ನ ದಯೆಯಿಂದ ಶಾಪವಿಮೋಚನವಾಯಿತು. ನನ್ನ ಪ್ರಾ
ರ್ಥನೆಯನ್ನು ಲಾಲಿಸಿ ಕೇಳು. ಉಪಕಾರಿಗೆ ಪ್ರತ್ಯುಪಕಾರ ಮಾಡದವನು ನರಾಧ
ಮನೆನಿಸಿಕೊಳ್ಳುವನು. ನಾನು ನಿನ್ನ ಗೌರವಕ್ಕೆ ತಕ್ಕ ಪ್ರತ್ಯುಪಕಾರ ಮಾಡಲು
ಅಶಕ್ತನಾದರೂ ನನ್ನ ಕೈಯುಲ್ಲಾದ ಮಟ್ಟಿಗೆ ಸಹಾಯ ಮಾಡಬೇಕಾದುದು ನನ್ನ
ಕರ್ತವ್ಯವು. ಈ ಕಾಲದಲ್ಲಿ ನನ್ನ ಅಲ್ಪ ಸೇವೆಯನ್ನು ಅಂಗೀಕರಿಸಬೇಕೆಂದು ಬೇಡು
ತ್ತೇನೆ. ಇಗೋ! ಈ ಸಮ್ಮೋಹನವೆಂಬ ಅಸ್ತ್ರವನ್ನು ನಿನಗೆ ಕೊಡುವೆನು. ದಯ
ಮಾಡಿ ಪರಿಗ್ರಹಿಸು. ಅಸಾಧ್ಯವಾದ ಯುದ್ಧಕಾಲದಲ್ಲಿ ಇದನ್ನು ಉಪಯೊಂಗಿಸಿದರೆ
ಎಂತಹ ಶತ್ರುಗಳನ್ನಾದರೂ ನಿಗ್ರಹಿಸಿ, ವಿಜಯವನ್ನುಂಟು ಮಾಡುವದು. ಎಂದು
ಹೇಳಿ ಆ ಅಸ್ತ್ರದ ಪ್ರಯೋಗೋಪಸಂಹಾರ ಕ್ರಮಗಳನ್ನು ಸಕೀಲಕ ಮಂತ್ರಗ
ಳೊಂದಿಗೆ ಉಪದೇಶಿಸಿಕೊಟ್ಟು, ಆತನ ಅನುಜ್ಞೆಯನ್ನು ಪಡೆದು ವಿಮಾನದಲ್ಲಿ ಕುಳಿ
ತು ದೇವನಗರಿಗೆ ತೆರಳಿದನು.

## ೨ ನೆಯ ಪ್ರಕರಣ.

ತರುವಾಯ ಅಜ ಮಹಾರಾಯನು ಸೈನ್ಯಸಮೇತನಾಗಿ ಅಲ್ಲಿಂದ ಹೊರಟು,
ಬಹು ತ್ವರೆಯಲ್ಲಿ ಪ್ರಯಾಣಮಾಡಿ, ವಿದರ್ಭನಗರವನ್ನು ಸೇರಿ, ಭೋಜರಾಜನಿಂದ
ಸತ್ಕೃತನಾಗಿ ತನಗೋಸ್ಕರ ಗೊತ್ತುಮಾಡಿದ್ದ ಬಿಡಾರದಲ್ಲಿ ಇಳಿದುಕೊಂಡನು.
ಅಲ್ಲಿಗೆ ಎಲ್ಲಾ ದೇಶಗಳ ರಾಜಕುಮಾರರೂ ಅಹಮಹಮಿಕೆಯೆಂದ ಬಂದು ಸೇರಿ
ದ್ದರು. ಆ ರಾಜಪುತ್ರರಲ್ಲಿ ಪ್ರತಿಯೊಬ್ಬನು ಇಂದುಮತಿಯು ತನ್ನನ್ನೇ ವರಿಸುವಳು,
ತನ್ನನ್ನೇ ವರಿಸುವಳು ಎಂಬ ತವಕದಿಂದ ಅನರ್ಘ್ಯ ವಸ್ತ್ರಾಭರಣಾಲಂಕೃತರಾಗಿ,
ತಮ್ಮ ಬೆಡಗನ್ನು ಬೀರುತ್ತಿದರು. ಸ್ವಯಂವರ ಮಂಟಪವು ಮನೋಜ್ಞವಾಗಿ
ಅಲಂಕರಿಸಲ್ಪಟ್ಟಿದ್ದಿತು. ಸ್ವಯಂವರಕ್ಕಾಗಿ ನಿರ್ಣೀತವಾದ ಮುಹೂರ್ತದ ವೇಳೆಗೆ
ಸರಿಯಾಗಿ ಎಲ್ಲಾ ರಾಜಕುಮಾರರೂ ಅಲ್ಲಿ ಬಂದು ನೆರೆದು ಉನ್ನತಾಸನಗಳಲ್ಲಿ
ಮಂಡಿಸಿದರು. ಆಗಲಾ ಭೋಜಮಹಾರಾಜನು ಮಂಗಳಸ್ನಾತೆಯಾಗಿ, ಸುವರ್ಣ
ವಸ್ತ್ರಮಾಲ್ಯಾಂಬರಾಲಂಕೃತಳಾಗಿ, ಪೆಣ್ಮರಿಜನ್ನು ತಳೆದಿರುವ ರತಿದೇವಿಯೋ, ಭಾರ
ತೀದೇವಿಯೋ, ಇಂಗಡಲ ಕುವರಿಯೋ ಎಂಬಂತೆ ಭ್ರಾಂತಿಯನ್ನು ಬೀರುತ್ತಾ
ಸಖಿಯರಿಂದೊಡಗೂಡಿದ ತನ್ನನುಜೆಯಾದ ಇಂದುಮತೀದೇವಿಯನ್ನು ಅಲ್ಲಿಗೆ ಕರೆ

7603



ಯಿಸಿಕೊಂಡು, ಅಲ್ಲಿ ನೆರೆದಿದ್ದ ರಾಜಕುಮಾರರ ಹೆಸರು ಶೌರ್ಯ ದೇಶ ಮುಂತಾದವು
ಗಳನ್ನು ವಿವರಿಸಿ, ಹೇಳಲು, ಆಕೆಯ ಪ್ರಿಯ ಸಖಿಯಾದ ಸುನಂದೆಯನ್ನು ನಿಯೋಗಿ
ಸಿದನು. ಅವಳು ರಾಜಕುಮಾರಿಯ ಪಾಲಕಿಯ ಜತೆಯಲ್ಲಿ ಹೊರಟು, ಒಬ್ಬೊಬ್ಬ
ರನ್ನಾಗಿ ರಾಜಕುಮಾರರನ್ನು ವಿವರಿಸುತ್ತಾ ಬಂದಳು.

"ಸಖಿಯೇ! ನೋಡು. ಇವನು ಕಳಿಂಗರಾಜನು. ಶೌರ್ಯದಲ್ಲಿ ಈತನಿಗೆ
ಸಮಾನನಾದವನೊಬ್ಬನೂ ಇಲ್ಲವು. ಯುದ್ಧದಲ್ಲಿ ಇವನನ್ನೆದುರಿಸಲು ಯಾರೂ
ಮುಂಬರಿಯರೆಂದು ಹೇಳಲಾಕೆಯು ಪರಿಹಾಸದಿಂದ ನಕ್ಕು ಮುಂದಕ್ಕೆ ದೃಷ್ಟಿಯನ್ನು
ಪ್ರಸರಿಸಿದಳು. ಆಗಲಾ ಸುನಂದೆಯು ಮುಂದಕ್ಕೆ ಬಂದು, "ತಾಯೀ! ನಿನ್ನ ಮೇಲ
ಣ ಮೋಹದಿಂದ ಮೀಸೆಗಳನ್ನು ಹುರಿಮಾಡುತ್ತಾ ಎವೆಯಿಕ್ಕದೆ ನೋಡುತ್ತಿರುವ
ಈ ಚೋಳ ಭೂಪಾಲನನ್ನು ಕಟಾಕ್ಷಿಸಿ ನೋಡು. ಅಡವಿಯಲ್ಲಿರುವ ಕೋಗಿಲೆಗಳು
ಈತನ ಕೀರ್ತಿಯನ್ನು ಪಕ್ಷಿಜಾತಿಗಳಿಗೆ ಪಾಠಹೇಳುತ್ತಾ ಆನಂದಗೊಳಿಸುತ್ತಿರುವುವು.
ಈತನನ್ನು ನೀನು ವರಿಸಬಾರದೇ?" ಎನಲಾ ರಾಜಕುಮಾರಿಯು ಆ ಮಾತುಗಳ
ನ್ನು ಕಿವಿಯಲ್ಲಿ ಹಾಕಿಕೊಳ್ಳದೆ ಮುಂದಕ್ಕೆ ನಡೆದಳು. ಸುನಂದೆಯು ಆಕೆಯ ಭಾವ
ವನ್ನು ತಿಳಿದು ಮುಂದಿನ ಪೀಠದಲ್ಲಿ ಕುಳಿತಿದ್ದ ಗೌಡರಾಜನನ್ನು ತೋರಿಸಿ, "ಸಾರ
ಸನೇತ್ರೇ! ಇಗೋ ಈ ಮಹಾರಾಜ ಪುತ್ರನನ್ನು ನೋಡು. ಈತನ ವೈರಿನೃಪಾಲರ
ಕಾಂತೆಯರು, ಅಮ್ಮಾ! ಪಾಯಸವನ್ನು ಕೊಡು ಎಂದು ಕೇಳಿದರೆ ಗಂಜಿಯನ್ನು
ಕೊಟ್ಟು ಅದಕ್ಕೆ ಸಕ್ಕರೆ ಹಾಕೆಂದು ಬೇಡಿದರೆ, ಉಪ್ಪನ್ನು ಹಾಕುತ್ತಾ ತುಪ್ಪವನ್ನೆರೆ
ಯೆಂದು ಅತ್ತರೆ ಬಿಸಿನೀರನ್ನೆರೆಯುವರು." ಎನ್ನುತ್ತಿರುವಷ್ಟರಲ್ಲಿ ಆಕೆಯ ಅಲಕ್ಷ್ಯ
ವನ್ನು ಕಂಡು ಪಾಲಕಿಯನ್ನು ಮುಂದಕ್ಕೆ ಒಯ್ದರು. ಅಲ್ಲಿಂದ ಮುಂದೆ ಚೇದಿ,
ಸೌರಾಷ್ಟ್ರ, ಕುಂಕಲ, ಲಾಟ, ಭೋಟ, ಕರಹಾಟ, ವರಾಟ, ವಿರಾಟ ಮುಂತಾದ
ದೇಶಾಧೀಶ್ವರರನ್ನು ತೋರಿಸಿ, ಅವರ ಗುಣಕಥನ ಮಾಡುತ್ತಾ ಬಂದ ಸುನಂದೆಗೆ
ಆ ಇಂದುಮತಿಯು ಪ್ರತ್ಯುತ್ತರ ಕೊಡದೆ ತಿರಸ್ಕಾರ ಸೂಚನೆಯ ಮಂದಹಾಸದಿಂದ
ಮುಂದುವರಿಯುತ್ತಿದ್ದಳು. ಅಲ್ಲಿಂದ ಮುಂದೆ ಬರಲೊಂದು ಪೀಠದಲ್ಲಿ ಸೂರ್ಯವಂಶಾ
ಲಂಕಾರನೆನಿಸಿ ಕುಳಿತಿದ್ದ ಅಜಮಹಾರಾಯನನ್ನು ಕಂಡು, ಕಡೆಗಣ್ಣ ಕಾಂತಿಯನ್ನು
ಚೆಲ್ಲುತ್ತಾ ನಿಲ್ಲಲಾ ಚೆಲ್ವೆಗಣ್ಣೆಯ ಮನವನರಿದಾ ಸುನಂದೆಯು, "ಎಸ್ನೋಡತೀ!
ಈತನೇ ಕೋಸಲ ರಾಜನೆನಿಸಿ ರಘುಮಹಾರಾಜನ ಪುತ್ರನಾದ ಅಜಮಹಾರಾಜನು.
ಸುಂದರಾಂಗಿಯೇ! ಅಂದಗಾರನಾದ ಇವನನ್ನು ಪೊಂದುವೆಯಾ?" ಎನಲಾ
ಕುಂದರದನೆಯು ಮಂದಹಾಸದಿಂದ ಅಲ್ಲಿಯೇ ನಿಂದು, ತನ್ನ ಕೈಯಲ್ಲಿದ್ದ ಪೂಮಾಲೆ
ಯನ್ನು ಅವನ ಕೊರಳಲ್ಲಿ ಹಾಕಿ ವರಿಸಿದಳು. ಭೋಜರಾಜನು ತನ್ನ ತಂಗಿಯ ಅಭಿ
ಜ್ಞತೆಯನ್ನೂ, ಅಜಮಹಾರಾಜನ ಪರಾಕ್ರಮವನ್ನೂ ಕೊಂಡಾಡಿ, ಬಹು ಸಂಭ್ರ

Digitized by ROJA MUTHIAH RESEARCH LIBRARY

ಮದಿಂದ ವಿಧ್ಯುಕ್ತಪ್ರಕಾರವಾಗಿ ವಿವಾಹ ವಿಧಿಗಳನ್ನು ನೆರವೇರಿಸಿ, ವಧುವರರಿಗೆ ಅನೇಕ ಹರಣ (ಮರ್ಯಾದೆ) ಗಳನ್ನು ಕೊಟ್ಟು ನಾಲ್ಕಾರು ದಿನಗಳಿರಿಸಿಕೊಂಡಿದ್ದು ಕಳುಹಿಸಕೊಟ್ಟನು.

ಸ್ವಯಂವರಕ್ಕೆಂದು ಬಂದಿದ್ದ ರಾಜರುಗಳು ಇಂದುಮತಿಯು ಅಜಮಹಾರಾಜನನ್ನು ವರಿಸಿದುದನ್ನು ನೋಡಿ, ಬಹುಮತ್ಸರಗೊಂಡು, ಇವರ ಮೇಲಣ ಹಗೆತನವನ್ನು ಸಾಧಿಸಿಕೊಳ್ಳಬೇಕೆಂದು ಯೋಚಿಸಿ, ಒಂದುಕಡೆ ಗುಂಪುಕೂಡಿ, ಇವರು ಹೊರಡುವ ಮಾರ್ಗದಲ್ಲಿ ಹೊಂಚುಹಾಕಿ ಕಾದುಕೊಂಡಿದ್ದರು. ಅಜಮಹಾರಾಜನು ನವೋಢೆಯಾದ ಪತ್ನೀಸಹಿತನಾಗಿ ತನ್ನ ರಾಜಧಾನಿಗೆ ಹಿಂದಿರುಗಿ ಪ್ರಯಾಣಮಾಡಿ ಬರುತ್ತಿರುವಾಗ, ದಾರಿಯಲ್ಲಿ ಕಳಿಂಗ ವಂಗಾಂಗ ದೇಶಗಳ ಮಹಾರಾಜರುಗಳು ಸೇನಾಸಹಿತರಾಗಿ ಈತನನ್ನು ಎದುರಿಸಿದರು. ಆಗಲಾ ರಾಜನಿಗೆ ಬಾಲವನ್ನು ತುಳಿದರೆ ರೇಗುವ ನಾಗರ ಹಾವಿನಂತೆ ಕೋಪವಿಮ್ಮಡಿಸಲು, ಅವರ ಚತುರಂಗ ಬಲವನ್ನು ಕ್ಷಣಕಾಲದಲ್ಲಿ ಸದೆದು, ಶತ್ರುರಾಜರ ಮೇಲೆ ಬಿದ್ದನು. ಶೂರರಾದ ಆ ರಾಜಕುಮಾರರು ತಮ್ಮ ಪರಾಕ್ರಮವನ್ನು ತೋರಿಸಲು ಇದೇ ಸಮಯವೆಂದು ಯೋಚಿಸಿ, ಭಾರಿಭಾರಿಯ ಬಾಣಗಳಿಂದಲಾ ರಾಯನನ್ನು ಸುತ್ತಲೂ ಮುತ್ತಿ ಮೆತ್ತುತ್ತಿದ್ದರು. ಆಗಲಾ ರಘು ಕುಮಾರನು ಇವರ ಗರ್ವಭಂಗ ಮಾಡುವದಕ್ಕೆ ಸಮ್ಮೋಹನಾಸ್ತ್ರವೇ ತಕ್ಕುದೆಂದು ತಿಳಿದು, ಅದನ್ನು ಬಿಲ್ಲಿನಲ್ಲಿ ಸಂಧಿಸಿ, ಶತ್ರುಗಳ ಮೇಲೆ ಪ್ರಯೋಗಿಸಿದನು. ಆಗಲಾ ಬಾಣವು ಪರರಾಜರನ್ನೆಲ್ಲಾ ಮೂರ್ಛೆಗೊಳಿಸಿ, ಅವರ ಸೈನ್ಯವನ್ನು ಭಂಗಿಸಲು, ಅವರೆಲ್ಲರೂ ಮುಖಕೆಟ್ಟು ದಿಕ್ಕುಪಾಲಾಗಿ ಚದರಿ ಹೋದರು. ತರುವಾಯ ಜಯಶೀಲನಾದ ಅಜಮಹಾರಾಜನು ಪತ್ನೀ ಸಹಿತನಾಗಿ ತನ್ನ ಪಟ್ಟಣವನ್ನು ಸೇರಿ, ತನ್ನ ತಂದೆಗೆ ವಂದಿಸಿ, ನಡೆದ ಸುದ್ದಿಯನ್ನೆಲ್ಲ ವಿವರಿಸಿದನು. ಆತನು ತನ್ನ ಮಗನ ಸಾಹಸಗಳಿಗೆ ತುಂಬಾ ಸಂತೋಷಪಟ್ಟು, ಮಗನನ್ನು ಅಪ್ಪಿಕೊಂಡು ಮನ್ನಿಸಿ ಕಳುಹಿಸಿದನು.

ಕೆಲವು ದಿವಸಗಳ ತರುವಾಯ ರಘುಮಹಾರಾಜನು ರಾಜ್ಯವನ್ನು ತನ್ನ ಮಗನಿಗೆ ಒಪ್ಪಿಸಿ, ತಾನು ಕಾಡಿಗೆ ಹೋಗಿ, ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಕಂದಮೂಲ ಫಲಾದಿಗಳಿಂದ ಹೊಟ್ಟೆತುಂಬಿಕೊಳ್ಳುತ್ತಾ ದೇವರ ಧ್ಯಾನದಲ್ಲಿ ಕಾಲ ಹರಣೆ ಮಾಡುತ್ತಿದ್ದನು. ಅಜಮಹಾರಾಜನು ಪಿತೃದತ್ತವಾದ ರಾಜ್ಯವನ್ನು ಧರ್ಮದಿಂದ ಆಳುತ್ತಾ, ಇಂದುಮತೀದ್ವಿತೀಯನಾಗಿ, ದ್ವಿತೀಯ ಪುರುಷಾರ್ಥವನ್ನು ಸಾರ್ಥಕಗೊಳಿಸುತ್ತಾ, ಅನುಪಮ ಕೀರ್ತಿಯನ್ನು ಲೋಕದಲ್ಲೆಲ್ಲ ಬಿತ್ತರಿಸಿ, ಸೌಖ್ಯದಿಂದಿರುವಾಗ ಇಂದುಮತಿಯು ಗರ್ಭವನ್ನು ಧರಿಸಿ, ನವಮಾಸಗಳು ಕಳೆದ ತರುವಾಯ ಒಂದು ಶುಭದಿನದಲ್ಲಿ ಗಂಡುಮಗುವನ್ನು ಹಡೆದಳು. ಅಜನು ಈ ಸಮಾ

7603



ಚಾರವನ್ನು ಕೇಳಿ, ಬಹು ಸಂತೋಷದಿಂದ ಜಾತಕರ್ಮಾದಿಗಳನ್ನು ಮಾಡಿಕೊಂಡು, ದೀನಾನಾಥರನ್ನು ಯಥೇಚ್ಛವಾಗಿ ಅನ್ನವಸ್ತ್ರ ದಕ್ಷಿಣೆಗಳಿಂದ ಆದರಿಸಿದನು. ಪ್ರಜೆಗಳೆಲ್ಲರೂ ತಮ್ಮ ದೊರೆಗೆ ಪುತ್ರೋತ್ಸವವಾದುದೆಂಬ ಸಂತೋಷದಿಂದ ಬೀದಿಬೀದಿಗಳಲ್ಲಿಯೂ ಕೊಬರಿ ಸಕ್ಕರೆಗಳನ್ನು ಗಾಡಿಗಳಲ್ಲಿ ತುಂಬಿಕೊಂಡು ಹೋಗಿ ಜನರಿಗೆಲ್ಲ ಹಂಚುತ್ತಾ ಬಂದುದಲ್ಲದೆ ತಮ್ಮ ಮನೆಬಾಗಿಲುಗಳನ್ನು ಮಾವಿನೆಲೆಯ ತೋರಣಗಳಿಂದಲೂ, ಬಾಳೆಯ ಕಂಬಗಳಿಂದಲೂ ಅಲಂಕರಿಸುತಿದ್ದರು. ರಾಜನು ತನ್ನ ಮಗನಿಗೆ ದಶರಥನೆಂದು ನಾಮಕರಣವನ್ನು ಮಾಡಿ, ಅನ್ನಪ್ರಾಶನ ಚೌಲೋಪನಯನಾದಿಕರ್ಮಗಳನ್ನು ಆಯಾಕಾಲಗಳಲ್ಲಿ ತಪ್ಪದೆ ನೆರವೇರಿಸಿ, ರಾಜರಿಗೆ ಆವಶ್ಯಕಗಳಾದ ವಿದ್ಯೆಗಳನ್ನೂ, ಅಸ್ತ್ರ ಶಸ್ತ್ರಗಳ ಪ್ರಯೋಗಗಳನ್ನೂ, ಕರಿತುರಗದೇರಾಟ ಮೊದಲಾದುವುಗಳನ್ನೂ ಕಲಿಸಿ, ಚತುರನೆನಿಸಿದನು. ದಶರಥನೂ ಕುಶಲಮತಿಯಾಗಿ ಯೌವನಪದವಿಯಲ್ಲಿ ಪದವನಿಡುತಿದ್ದನು.

ಒಂದುದಿನ ಅಜಮಹಾರಾಜನು ಇಂದುಮತಿಯೊಡಗೂಡಿ, ವನವಿಹಾರ ಮಾಡಬೇಕೆಂದು ಹೊರಟು, ಉದ್ಯಾನವನಕ್ಕೆ ಬಂದು, ಅಲ್ಲಿದ್ದ ತರುಗುಲ್ಮಲತಾಕುಸುಮಸಮುದಯವನ್ನು ನೋಡಿ, ಅವುಗಳ ವಿಚಿತ್ರ ನಿರ್ಮಾಣ ಸೃಷ್ಟಿವೈಚಿತ್ರವನ್ನೂ, ಪರಮಾತ್ಮನ ಮಹಿಮೆಯನ್ನೂ ನೋಡಿ ನೋಡಿ, ಕೊಂಡಾಡಿ, ಮನದಣಿಯದೆ, ಅಲ್ಲಿದ್ದ ಒಂದು ನಿಕುಂಜದಲ್ಲಿ ಪುಷ್ಪಾಸ್ತರಣದ ಮೇಲೆ ಕುಳಿತುಕೊಂಡು ವಿನೋದಕ್ಕಾಗಿ ತನ್ನ ಪತ್ನಿಯೊಡನೆ ಚತುರಂಗವನಾಡುತಿದ್ದನು.

ಸರಸವನಾಡುತೆ ಸಖಿಯೊಡ ।
ನುರುತರ ಚತುರಂಗವಾಡಿ ನರ್ಮೋಕ್ತಿಗಳಿಂ ॥
ನರಪಾಲಂ ಬಿನದದೊಳಿರೆ ।
ಹರಹರ! ಪೂಮಾಲೆಯೊಂದು ಬಿಳ್ದುದು ನಭದಿಂ ॥

ಅದೇವೇಳೆಗೆ ಸರಿಯಾಗಿ ದೇವಕನ್ಯೆಯರು ನಾರದನಿಗೆ ಒಂದುಮಂದಾರಮಾಲೆಯನ್ನು ತಂದುಕೊಟ್ಟರು. ಆತನು ಅದನ್ನು ತೆಗೆದುಕೊಂಡು, ಗಗನಮಾರ್ಗದಲ್ಲಿ ಸಂಚಾರಮಾಡುವಾಗ ಅದು ಕೈಜಾರಿ ಇಂದುಮತೀದೇವಿಯ ಎದೆಯ ಮೇಲೆ ಸರಿಯಾಗಿ ಗುರಿಯಿಟ್ಟಂತೆ ಬಂದುಬಿತ್ತು. ಮೃದುಪುಷ್ಪಗಳಿಂದ ಕಟ್ಟಲ್ಪಟ್ಟಿದ್ದ ಆ ಪೂಮಾಲೆಯು ವಜ್ರಾಯುಧದಂತೆ ಇಂದುಮತಿಯ ಎದೆಯ ಮೇಲೆ ಬಿದ್ದಕೂಡಲೇ ಆ ನೋವನ್ನು ತಾಳಲಾರದೆ ಆ ದೇವಿಯು ಆಯುಃಪರಿಮಿತಿ ತೀರಿದುದರಿಂದ ಪಂಚತ್ವವನೆಯ್ದಿದಳು. ಆದನ್ನು ಕಂಡು ಅಜಮಹಾರಾಜನು ತಡೆಯಲಾರದ ಶೋಕದಿಂದ ಮೂರ್ಛೆಹೋಗಿ ನೆಲದಲ್ಲಿ ಬಿದ್ದು, ಕ್ಷಣಕಾಲದ ಮೇಲೆ ಎಚ್ಚತ್ತು “ಓಹೋ! ಏನಿದು? ಪ್ರಾಣಕಾಂತೆಯೇ? ನಿನಗೆ ಆಕಸ್ಮಿಕವಾಗಿ ಇಂತಹ ದುರ್ಮರಣವು ಸಂಭ

Digitized by ROJA MUTHIAH RESEARCH LIBRARY

ವಿಸಬಹುದೆ? ಮೃತ್ಯುವಿಗೆ ಕರುಣವೆತ್ತಣದು? ನಿರಪರಾಧಿಯಾದ ಅಬಲೆಯನ್ನು ಅಕಾಲದಲ್ಲಿ ಕೊಂಡೊಯ್ಯಲು ಅದಕ್ಕೆ ಮನಸ್ಸು ಹೇಗೆ ಬಂದಿತು? ಅಯ್ಯೋ! ಇನ್ನು ನನಗೆ ರಾಜ್ಯವೇತಕ್ಕೆ? ದುರ್ದೈವಿಯಾದ ನಾನು ಅಸಹಾಯನಾಗಿ ಈ ಭೂಮಂಡಲದಲ್ಲಿ ಹೇಗೆ ಜೀವಿಸಿಕೊಂಡಿರಲಿ? ಹಾ! ವಿಧಿಯೇ! ಇವಳ ಜತೆಯಲ್ಲಿ ನನ್ನನ್ನೂ ಒಯ್ಯಬಾರದಾಗಿತ್ತೆ? ಅತಿ ಮೃದುವಾದ ಪೂಮಾಲೆಯು ಬಿದ್ದ ಮಾತ್ರಕ್ಕೆ ಸಾವುದೆಂದರೆ ಇದು ದೈವಮಾಯೆಯೇ ಹೊರತು ಮತ್ತೊಂದಿಲ್ಲ. ನನಗೆ ದಿಕ್ಕೇ ತೋರದಲ್ಲ!" ಎಂದು ಹಲವು ಪರಿಯಿಂದ ಪ್ರಲಾಪಿಸುತ್ತಿದ್ದನು.

ಆಗ ನಾರದನು ಆಕಾಶದಿಂದ ಇಳಿದು ಬಂದು, ಆತನಿಗೆ ದುಃಖೋಪಶಮನವಾಗುವಂತೆ ಸಮಾಧಾನೋಕ್ತಿಗಳನ್ನು ನುಡಿಯುತ್ತಿರಲು, ತನ್ನ ಪತ್ನಿಯ ಮರಣಕ್ಕೆ ಆ ಮುನಿಯೇ ಕಾರಣನೆಂದು ತಿಳಿದು, ಕಡುರೋಷದಿಂದ ಅವನನ್ನು ಕುರಿತು "ಎಲೈ ಮುನಿಯೇ! ನಾಮಮಾತ್ರಕ್ಕೆ ನಿರಾಭಾರಿಯೆಂದು ಹೆಸರುಗೊಂಡು ನಾರಿಯನ್ನು ಕೊಂದ ನಾರದನೇ! ಈ ಇಂದುಮತಿಯು ನಿನಗೆ ಯಾವ ಅಪರಾಧವನ್ನು ಮಾಡಿದ್ದಳು? ನಿಷ್ಕಾರಣವಾಗಿ ನೀನು ಇವಳನ್ನೇತಕ್ಕೆ ಕೊಂದೆ? ಸ್ನಾನವೋ, ಜಪವೋ, ತಪವೋ, ಸಂಧ್ಯಾವಂದನೆಯೋ, ದೇವತಾರ್ಚನೆಯೋ, ಈ ವೈದಿಕ ಕೃತ್ಯಗಳ ನುಳಿದು, ಶಸ್ತ್ರಧಾರಿಯಾದ ಕ್ಷತ್ರಿಯನಂತೆ ಕ್ರೂರನಾಗಿ ಹೇಸದೆ ಹೆಂಗೊಲೆಗೆ ನೀನು ಪ್ರವರ್ತಿಸಬಹುದೆ? ಪಾಪಿಯೇ! ನಮ್ಮಿಬ್ಬರನ್ನೂ ಅಗಲಿಸಿ, ನೀನು ಯಾವ ನರಕಕ್ಕೆ ಹೋಗುವೆ? ನನ್ನನ್ನೂ ಅವಳ ಜತೆಯಲ್ಲಿ ಸೇರಿಸು. ಇಗೋ! ಈ ಕತ್ತಿಯಿಂದ ನನ್ನ ತಲೆಯನ್ನು ಕಡಿದುಬಿಡು." ಎಂದು ಶೋಕಾವೇಶದಿಂದ ನಾರದನನ್ನು ನಿಂದಿಸುತ್ತ ಬಂದನು.

ಆಗ ನಾರದನು ಅಜನನ್ನು ಕುರಿತು "ಮಹಾರಾಜನೇ! ಕೇಳು. ಸಂತಾಪಕಾಲದಲ್ಲಿ ಮನುಷ್ಯರು ಭ್ರಾಂತರಾಗಿ ಎಂತೆಂತೋ ಮನಬಂದಂತೆ ನುಡಿಯುತ್ತಾ ಬರುವದು ವಿಂತೆಯಲ್ಲ. ಸಂಸಾರಸುಖವು ಸ್ವಪ್ನದ ಕ್ಷೀರಪಾನದಂತೆ ಮಿಥ್ಯಾರೂಪಕವು. ಪ್ರಾಜ್ಞರು ನಶ್ವರವಾದ ಈ ಸುಖವನ್ನು ಸತ್ಯವೆಂದು ಭಾವಿಸದೆ ಮನೋದಾರ್ಢ್ಯದಿಂದಿರತಕ್ಕದ್ದು. ಕಾಂತಾಸಂಗಮವು ಸಂತಾನಾಂತವಾದುದಲ್ಲವೆ? ತರುವಾಯ ಸ್ತ್ರೀ ಕಾಮುಕತೆಯು ದೂಷ್ಯವೆನಿಸುವುದು. ಭೂಮಿಯಲ್ಲಿ ಕಾಂತೆಯರಿಲ್ಲವೆ? ಎಷ್ಟು ಮಂದಿ ಸಂಸಾರಸುಖವನ್ನು ಬಯಸಿದವರು? ಎಷ್ಟು ಜನ ಅನುಭವಿಸಿಯೂ ತಣಿಯದವರು? ಎಷ್ಟು ಮಂದಿ ಅರಸರು ಬೂದಿಯಲ್ಲಿ ಬೆರೆದು ಹೋದರು? ಭೂಮಿಪಾಲಕನಾದ ನೀನು ಒಬ್ಬ ಹೆಂಗಸಿಗಾಗಿ ಇಷ್ಟು ವಿಷಾದ ಪಡಬೇಕಾದುದೇಕೆ? ವಿಧಿಲಿಖಿತವಿದ್ದಂತೆ ಯಾರಿಗೆ ಯಾವ ಕಾಲದಲ್ಲಿ ಯಾವ ಸ್ಥಳದಲ್ಲಿ ಯಾರಿಂದ ಯಾವುದು ನಡೆಯಬೇಕಾಗಿದೆಯೋ, ಅದು ತಪ್ಪದೆ ನಡದೇ ತೀರುವುದೆಂದು ತಿಳಿದು ಧೀರನಾಗಿರು. ಎಲೈ ನೃಪಪುಂಗವನೇ! ಈ ಚಿಂತಾಂಗನೆಯನ್ನು ಮೃತಳಾದ ನಿನ್ನಂಗ

Digitized by ROJA MUTHIAH RESEARCH LIBRARY



ನೆಯ ಜತೆಯಲ್ಲಿ ಕಳುಹಿ, ರಾಜ್ಯಾಂಗಗಳನ್ನು ನೋಡುತ್ತಾ, ಸಂತಸದಿಂದ ರಂಗನಾಥನ ಪಾದಸೇವೆಯನ್ನು ಮಾಡಿಕೊಂಡಿದ್ದರೆ ಅಭಂಗವಾದ ಸೌಖ್ಯವನ್ನು ಹೊಂದುವೆ. ಇದಲ್ಲದೆ ಮತ್ತೊಂದು ರಹಸ್ಯವೂ ಉಂಟು; ಅದನೊರೆವೆನು, ಲಾಲಿಸು.

ಪೂರ್ವಕಾಲದಲ್ಲಿ ತೃಣಬಿಂದುವೆಂಬ ಋಷಿಯು ಘೋರವಾದ ತಪಸ್ಸನ್ನು ಮಾಡುತ್ತಿರಲು, ದೇವೇಂದ್ರನು ಆತನ ತಪಸ್ಸನ್ನು ಕೆಡಿಸಬೇಕೆಂದು ಆಲೋಚನೆ ಮಾಡಿ, ಹರಣೀ ಎಂಬ ಅಪ್ಸರಸ್ತ್ರೀಯನ್ನು ಕರೆದು, "ಎಲೌಸ್ವರ್ವೇಶ್ಯೇ! ನೀನು ದೇವಕಾರ್ಯಕ್ಕಾಗಿ ಒಂದು ಕೆಲಸವನ್ನು ಈಗಲೇ ಮಾಡಬೇಕಾಗಿದೆ. ಘೋರತಪವನಾಚರಿಸುತ್ತಿರುವ ತೃಣಬಿಂದು ಮುನಿಯ ಬಳಿಗೆ ಹೋಗಿ, ನಿನ್ನ ಹಾವಭಾವವಿಲಾಸಗಳಿಂದ ಆತನನ್ನು ಮರುಳುಗೊಳಿಸಿ, ಅವನ ತಪೋವಿಘ್ನವನಾಚರಿಸಿ ಬರತಕ್ಕದು." ಎಂದು ಆಜ್ಞಾಪಿಸಿದನು. ಆ ಗಣಿಕೆಯು ಪುರಂದರಂಗೆ ಮಣಿದು, ದಿವ್ಯಾಂಬರಾಭರಣಾಲಂಕೃತೆಯಾಗಿ ಸಿಂಗರಿಸಿದ ಪೆಣ್ಬೊಂಬೆಯಂತೆ ತೊಳಗುತ್ತಾ, ಆ ರಿಸಿಯು ತಪವಂಗೆಗೆಯ್ಯುತ್ತಿದ್ದೆಡೆಗೆ ಬಂದು ನರ್ತಿಸತೊಡಗಿದಳು. ಆ ಮುನೀಂದ್ರನು ವಿಶ್ವಾಮಿತ್ರನಂತೆ ಚಪಲ ಚಿತ್ತನಲ್ಲ. ಇವಳ ವಿಲಾಸವಿಭ್ರಮಗಳಿಗೆ ಮನಸೋಲದೆ, ಬಲುಮುಳಿದು ಚಲದಿಂದ. "ಎಲೆಗೆ! ತೊತ್ತೇ! ತೊಲಗು ಜಿತೇಂದ್ರಿಯರಾದ ನಮ್ಮಂತವರಲ್ಲಿ ನಿನ್ನ ಆಟಗಳು ನಡೆಯಲಾರವು; ನೀನು ಯೌವನ ಮದದಿಂದ ಈ ಪುಂಡಾಟವಾಡಿದುದಕ್ಕೆ ತಕ್ಕ ದಂಡನೆಯನ್ನು ಈಗಲೇ ಮಾಡಿಬಿಡುವೆನು. ನೀನು ಭೂಮಂಡಲದಲ್ಲಿ ಒಬ್ಬ ಅರಸನ ಹೆಂಡತಿಯಾಗಿ ಜನಿಸು. ಭಂಡರಿಗೆ ಮುಂಡನವೇ ದಂಡನೆಯು ಹೋಗು." ಎಂದು ಶಪಿಸಲು, ಆಗಲಾ ತರುಣಿಯು ಹರಿಣಿಯಂತೆ ಬೆದರಿ, ಕಣ್ಣೀರುಸುರಿಸುತ್ತಾ, ಮುನಿವರನ ಅಡಿಗಳಲ್ಲಿ ಬಿದ್ದು ಹೊರಳುತ್ತಾ "ಎಲೈ ಕರುಣಾಶೀಲನೇ! ಬಾಲೆಯನ್ನು ಬೈಗುಳಪಾಲುಮಾಡಿ, ಗೇಲಿಗಿಡಬಹುದೆ? ಕೋಳು ಹೋದೆನಲ್ಲ! ಒಡೆಯನ ನುಡಿಯನ್ನು ನಡಿಸುವುದರಲ್ಲಿ ತಪ್ಪೇನು? ದುಡುಕಿ ಬಡಜಂತುವಿನ ಮೇಲೆ, ಕಡುಮುಳಿದು ಹೊಡೆಯ ತೊಡಗಿದರೆ ತಡೆಯಲಾಪೆನೊ? ನಿಮ್ಮಡಿಯ ಕರುಣೆಯಿಂದಲೇ ತಡಿಯನ್ನು ಕಾಣಬೇಕಾಗಿದೆ. ನನ್ನ ಹುಡುಗಾಟದ ತಪ್ಪನ್ನು ತೊಡೆದು, ಕಡೆಗಣ್ಣಿಂದ ನೋಡಬೇಕು." ಎಂದು ಬೇಡಿಕೊಳ್ಳಲಾ, ತೃಣಬಿಂದುವು ದಯಾರ್ದ್ರಚಿತ್ತನಾಗಿ "ನೀನು ಮಂದಾರ ಮಾಲೆಯನ್ನು ಯಾವಾಗ ನೋಡುವೆಯೋ ಆಗ ನಿನ್ನ ಶಾಪವಿಮೋಚನವಾಗುವುದೆಂದು ಅನುಗ್ರಹಿಸಿ, ಎಂದಿನಂತೆ ತನ್ನ ತಪಸ್ಸಿಗೆ ಕುಳಿತನು. ಮುನಿಯ ಕೋಪದಿಂದ ತಾಪಗ್ರಸ್ತಳಾಗಿ ಈ ಪೊಡವಿಯಲ್ಲಿ ಇಂದುಮತೀನಾಮಕಳಾಗಿ ಜನಿಸಿದ ನಿನ್ನ ರಾಣಿಯು ಶಾಪವಿಮುಕ್ತಳಾಗಿ ದೇವಲೋಕವನ್ನು ಸಾರಿದಳು. ಚಿಂತೆಯನ್ನು ಬಿಟ್ಟು, ಸಂತಸದಿಂದಿರು." ಎಂದು ಸಂತೈಸಲಾಧರಣೀಕಾಂತನು ತತ್ಕಾಲಕ್ಕೆ ಸಮಾಧಾನವನ್ನು ತಂದುಕೊಂಡು, ನಾರದನ ಅಪ್ಪಣೆಯನ್ನು ಪಡೆದು ತನ್ನ ರಾಜಧಾನಿಗೆ ಬಂದು, ಬಂದೆರಡು ದಿನಗ

ಳಿದ್ದು, ಚಿತ್ತದಬೇಸರದಿಂದ ಐಹಿಕಸುಖಗಳಲ್ಲಿ ಆಸೆಯನ್ನ ತೊರೆದು, ತನ್ನ ಮಗನಿಗೆ ರಾಜ್ಯಭಾರವನೊಪ್ಪಿಸಿ, ಸತೀವಿಯೋಗ ದುಃಖದಿಂದ ಸರಯೂ ಭಾಗೀರಥೀ ಸಂಗಮಸ್ಥಳದಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿದನು. ಯಾವಸ್ಥಳದಲ್ಲಿ ಮೃತಿಹೊಂದಿದರೆ ಆತ್ಮಹತ್ಯಾದೋಷವಿಲ್ಲವೆಂದು ಶಾಸ್ತ್ರಗಳು ಉದ್ಘೋಷಿಸುತ್ತಿವೆಯೋ ಅಂತಹ ಸರಯೂಗಂಗಾಸಂಗಮದಲ್ಲಿ ದೇಹವನ್ನು ಬಿಟ್ಟುದರಿಂದ ಆತನು ಗಂಧರ್ವಲೋಕಕ್ಕೆ ಹೋಗಿ, ಹರಿಣಿಯೊಡನೆಸೇರಿ, ನಿತ್ಯಕ್ರೀಡಾವಿನೋದಗಳಿಂದ ಸೌಖ್ಯವನ್ನನುಭವಿಸುತ್ತಿದ್ದನು.

## ೪ ನೆಯ ಪ್ರಕರಣ.

ದಶರಥ ಮಹಾರಾಜನು ಅಯೋಧ್ಯಾ ದೇಶವನ್ನು ಧರ್ಮದಿಂದ ಪರಿಪಾಲಿಸುತ್ತಿದ್ದನು. ಯುವಕನಾದ ಆ ರಾಜಕುಮಾರನು ತನಗೆ ಅನುರೂಪಳಾದ ರಾಜಕನ್ಯೆಯನ್ನು ವಿವಾಹಮಾಡಿಕೊಳ್ಳಬೇಕೆಂಬ ಅಪೇಕ್ಷೆಯಿಂದ ಚಿಂತಿಸುತ್ತಿದ್ದನು. ಅಷ್ಟರಲ್ಲಿ ಗ್ರೀಷ್ಮಕಾಲವು ಬಂದಿತು. ಆ ಕಾಲದಲ್ಲಿ ವಾಯುವು ಎಲ್ಲಿಗೆ ಹೋಗಿ ಸೇರಿಕೊಂಡನೋ ತಿಳಿಯದು. ಮರಗಳ ಎಲೆಗಳು ಅಲ್ಲಾಡುತ್ತಿರಲಿಲ್ಲ. ಜನರು ಬಿಸಿಲಿನ ಝಳದಿಂದ ಬಾಡಿ ಬಳಲುತ್ತಿದ್ದರು. ಬುಗ್ಗೆಗಳಲ್ಲಿ ನೀರೂರುವ ಹಾಗೆ ಜನರ ಮುಖಗಳಲ್ಲಿ ಬೆವರು ನೀರು ಹರಿದು ಸುರಿಯಲಾರಂಭಿಸಿತು. ಮಾರ್ಗಸ್ಥರು ಬಿಸಿಲಿನ ಬೇಗೆಯಿಂದ ಪಾದಗಳು ಸುಡುತ್ತಿರಲು, ತೊರೆಗಳೆಂಬ ಭ್ರಾಂತಿಯಿಂದ ಮರೀಚಿಕೆಗಳನ್ನು ಅರಸಿಕೊಂಡು ಹೋಗುತ್ತಿದ್ದರು. ಕೆರೆಕೊಳಗಳೆಲ್ಲವೂ ಬತ್ತಿಹೋಗಿದ್ದುವು. ಆ ಕಾಲದಲ್ಲಿ ಕೆಲವರು ಬೇಟೆಗಾರರು ಬಂದು ಮಹಾರಾಜನಿಗೆ ಮಣಿದು,—ಎಮ್ಮೊಡೆಯಾ! ಈ ಕಾಲವು ಬೇಟೆಗೆ ಯೋಗ್ಯವಾಗಿರುವುದರಿಂದ ಚಿತ್ತಕ್ಕೊಪ್ಪಿದರೆ ಮೃಗಯಾವಿಹಾರಕ್ಕೆ ಚಿತ್ತೈಸಬಹುದು; ಎಂದು ಬೇಡಿಕೊಂಡರು. ದಶರಥನು ಅವರ ಪ್ರಾರ್ಥನೆಯನಂಗೀಕರಿಸಿ, ಬೇಟೆಗೆ ತಕ್ಕ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು, ಮಿತಪರಿವಾರದೊಡನೆ ನಗರದಿಂದ ಹೊರಟು, ಕಾಡಿಗೆ ಹೋಗಿ ಮೃಗಪಕ್ಷಿಗಳನ್ನು ಬೇಟೆಯಾಡಿ ದಣಿದು, ಎಲ್ಲಿಯಾದರೂ ಒಂದುಕಡೆ ವಿಶ್ರಮಿಸಿಕೊಳ್ಳಬೇಕೆಂದು ಅಪೇಕ್ಷಿಸಿದನು. ಆಗಲನುಚರರು "ಮಹಾಸ್ವಾಮಿ! ತಾವು ಇಷ್ಟುದೂರ ದಯಮಾಡಿಸಿ, ಹತ್ತರವಿರುವ ಅತ್ರಿಮುನಿಯ ದರುಶನವನ್ನು ತೆಗೆದುಕೊಳ್ಳದೆ ಹೊರಡುವುದು ಒಳ್ಳೆಯದಾಗಿ ಕಾಣುವುದಿಲ್ಲ. ಸಮೀಪದಲ್ಲಿಯೇ ಆ ಮಹರ್ಷಿಯ ಆಶ್ರಮವಿರುವುದು." ಎಂದು ಬಿನ್ನವಿಸಲಾ ಮಾತಿಗೆ ಮನಂದಂದು ಋಷಿವರ್ಯನ ಬಳಿಗೆಯ್ದಿ ವಿನಯದಿಂದ ನಮಸ್ಕಾರ ಮಾಡಲು, ಆತನು ಮಹಾರಾಜನನ್ನು ಹರಿಸಿ, ಕುಶಲ ಪ್ರಶ್ನೆಗಳನ್ನು ಕೇಳಿದ ತರುವಾಯ "ಎಲೈ ರಾಜೇಂದ್ರನೇ! ನಿನ್ನ ಪ್ರಜೆಗಳನ್ನು ಮಕ್ಕಳಂತೆ



ನೋಡಿಕೊಂಡಿರುವೆಯಾ? ನಿನ್ನ ಸೇವಕರನ್ನು ಮನ್ನಿಸಿ, ಆಶ್ರಿತರ ಕೋರಿಕೆಗಳನ್ನು ನೆರವೇರಿಸುತ್ತಲಿರುವೆಯಾ? ಅರಸರು ಸತ್ಯವನೆಂದಿಗೂ ಬಿಡಲಾಗದು; ಜನಗಳ ಸೌಖ್ಯಕ್ಕೆ ಅಗತ್ಯವಾದ ಕಾರ್ಯಗಳನ್ನು ಮಾಡುವುದರಲ್ಲಿ ಹಿಂಜರಿಯಬಾರದು, ನೆವನೆವಗಳಿಂದ ಹೆಚ್ಚು ತೆರಿಗೆಗಳನ್ನು ತೆಗೆದುಕೊಳ್ಳಬಾರದು; ಭಂಡಾರದ ಹಣವನ್ನು ವಿನೋದ ಕಾರ್ಯಗಳಿಗೆ ವೆಚ್ಚಮಾಡಬಾರದು. ಚಾಡಿಕೋರರ ಮಾತುಗಳಿಗೆ ಕಿವಿಗೊಡಬಾರದು. ಸಜ್ಜನರ ನುಡಿಗಳನ್ನು ತಿರಸ್ಕರಿಸಬಾರದು. ಜನರು ತಮ್ಮ ಹೆಣ್ಣುಮಕ್ಕಳನ್ನು ಮಾರುವುದನ್ನೂ, ಬ್ರಾಹ್ಮಣರು ವೇದವಿಕ್ರಯ ಮಾಡುವುದನ್ನೂ, ಅನ್ನವಿಕ್ರಯ ಮಾಡುವುದನ್ನೂ, ಮೋಸದಿಂದ ಸತ್ಯವನ್ನು ಮರೆಮಾಜುವುದನ್ನೂ ತಪ್ಪಿಸಬೇಕು. ಜೂಜಾಡುವದೂ, ಗುರುಹಿರಿಯರನ್ನು ನಿಂದಿಸುವುದೂ, ಪತಿಯ ಮಾತನ್ನು ಮೀರುವುದೂ, ಸತಿಯರನ್ನು ಕೈಬಿಡುವುದೂ, ಇಂತಹ ಕೃತ್ಯಗಳನ್ನು ಮಾಡುವ ಜನರಿಗೆ ಶಿಕ್ಷೆಮಾಡದೆ, ಬಿಡಬಾರದು. ಕೃಷಿಕರಿಗೆ ಸಾಲವನ್ನು ಕೊಡುವುದು, ವರ್ತಕರು ಹೆಚ್ಚು ಬಡ್ಡಿಯನ್ನು ಪಡೆಯದಂತೆ ತಡೆಯುವುದು, ಹಣದಾಸೆಯಿಂದ ದನಕರುಗಳನ್ನು ಕಟುಕರಿಗೆ ಮಾರದಂತೆ ತಪ್ಪಿಸುವುದು, ಇವು ಮುಖ್ಯವಾದ ರಾಜಧರ್ಮಗಳು. ರಾಜರಿಗೆ ಚಾರರೇ ಕಣ್ಣುಗಳಾದುದರಿಂದ ಆಯಾ ಕಾಲಗಳಲ್ಲಿ ಬೇಹುಗಾರರಿಂದ ರಾಷ್ಟ್ರದ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿರಬೇಕು. ಜಾರಚೋರರನ್ನು ಶಿಕ್ಷಿಸದೆ ಬಿಟ್ಟುಬಿಟ್ಟರೆ ಧರ್ಮಕ್ಕೆ ಲೋಪಬರುವುದು. ಪ್ರಸಿದ್ಧವಾದ ಸೂರ್ಯವಂಶದಲ್ಲಿ ಹುಟ್ಟಿದ ನೀನು ರಾಜ್ಯದಲ್ಲಿ ಧರ್ಮಪ್ರತಿ ಕೈಮಾಡಿರುವೆಯೆಂದು ನಂಬುತ್ತೇನೆ." ಎಂದು ನುಡಿದು ಮತ್ತಿಂತೆಂದನು.

ಎಲೈ ರಾಜಶ್ರೇಷ್ಠನೇ! ಮನ್ಮಥನನ್ನು ತಿರಸ್ಕರಿಸುವ ಸುಂದರಾಂಗನಾಗಿಯೂ, ಹರೆಯದವನಾಗಿಯೂ, ಮಹಾರಾಜನಾಗಿಯೂ ಇರುವ ನೀನು ಬ್ರಹ್ಮಚರ್ಯದಿಂದಿರುವುದು ತಗದು. ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಶ್ರೇಷ್ಠವೆಂದು ಶಿಷ್ಟರುಸಿರಿರುವರು; ಪ್ರೀತಿಪಾತ್ರಳಾದ ಅರ್ಧಾಂಗಿಯ ಸದ್ಬೋಧೆಗಳೂ, ಹಿತವಾಕ್ಯಗಳೂ, ಮನುಷ್ಯರಿಗೆ ಸನ್ಮಾರ್ಗದರ್ಶಕಗಳಾಗಿರುವುವು. ನೀನು ಯೋಗ್ಯಳಾದ ಕನ್ಯೆಯನ್ನು ಕೈಪಿಡಿದು, ಇಹಪರ ಸೌಖ್ಯಗಳನ್ನು ಬೆಳೆಯಿಸತಕ್ಕುದು! ಎಂದು ನಿರೂಪಿಸಲಾ ರಾಜನ್ಯನು "ಮುನಿವರ್ಯನೇ! ಸುಗುಣ ಶೀಲೆಯಾದ ಬಾಲೆಯು ಸಿಕ್ಕುವುದು ಕಷ್ಟ ಸುಂದರಾಂಗಿಯಾಗಿಯೂ, ಸದಾಚಾರಸಂಪನ್ನೆಯಾಗಿಯೂ ಇರುವ ರಾಜಕನ್ಯೆಯನ್ನು ತಾವು ನೋಡಿದ್ದರೆ ಅಪ್ಪಣೆಕೊಡಿಸಬಹುದು." ಎಂದು ವಿನಯದಿಂದ ಬೇಡಿದನು. ಆಗ ಅತ್ರಿಮಹರ್ಷಿಯು ಸ್ವಲ್ಪಹೊತ್ತು ಆಲೋಚಿಸಿ, "ಎಲೈ ದಶರಥನೇ! ದಕ್ಷಿಣ ಕೋಸಲಾಧಿಪತಿಯಾದ ಭಾನುಮಂತನಿಗೆ ಪಟ್ಟಮಹಿಷಿಯಾದ ಚಂದ್ರಭಾಗಾದೇವಿಯಲ್ಲಿ ಉದಿಸಿದ ಕೌಸಲ್ಯೆಯೆಂಬ ಕನ್ಯೆಯು ಗುಣಮಾನ್ಯೆಯಾಗಿರುವಳು. ಅವಳು ನಿನಗೆ ಅನುರೂಪಳಾದವನಿತೆಯಾದುದರಿಂದ ನೀನು ಅವಳನ್ನು

Digitized by ROJA MUTHIAH RESEARCH LIBRARY

ಮದುವೆಯಾಗಬಹುದು.” ಎಂದು ಹೇಳಿದನು. ಮಹಾರಾಜನು ಮಹಾಪ್ರಸಾದವೆಂದು ಆ ಮಹರ್ಷಿಯ ಅನುಜ್ಞೆಯನ್ನು ಪಡೆದು, ತನ್ನ ರಾಜಧಾನಿಗೆ ಹಿಂದಿರುಗಿ ಬರುವಾಗ ಮಾರ್ಗದಲ್ಲಿ ತನ್ನ ಕುಲಗುರುವಾದ ವಸಿಷ್ಠ ಮಹರ್ಷಿಯ ಆಶ್ರಮವನ್ನು ಕಂಡು, ಅಲ್ಲಿಳಿದು ಆತನ ಬಳಿಗೆ ಹೋಗಿ ನಮಸ್ಕರಿಸಿ, ಆತನ ಆಶೀರ್ವಾದವನ್ನು ಪಡೆದು “ಮಹಾತ್ಮಾ! ಸಂಸಾರಸಾಗರದಿಂದ ಉತ್ತೀರ್ಣನಾಗುವ ಬಗೆ ಹೇಗೆ? ಯಾವ ದೈವವನ್ನು ಯಾವ ವಿಧದಿಂದ ಪ್ರಾರ್ಥಿಸಿದರೆ, ಸುರಕ್ಷೆಯುಂಟಾಗುವುದು? ದಯಮಾಡಿ ಅನುಗ್ರಹಿಸಬೇಕೆಂದು ಬೇಡಿಕೊಳ್ಳಲು, ಆ ಸದ್ಗುಣ ಗರಿಷ್ಠನಾದ ವಸಿಷ್ಠನು ದಶರಥಂಗಿಂತೆಂದನು. “ಎಲೈ ಮಹಾರಾಜನೇ! ರಾಮತಾರಕನೆಂಬ ಮಂತ್ರರಾಜವನ್ನು ಮನಸ್ಸಿನಲ್ಲಿ ಸ್ಮರಿಸಿದರೆ ಕೋಟಿಜನ್ಮಗಳಲ್ಲಿ ಮಾಡಿದ ಮಹಾಪಾತಕಗಳೂ ಪರಿಹಾರವಾಗುವುವು. ಪುರುಷಾರ್ಥಚತುಷ್ಟಯವನ್ನು ಪಡೆಯಲು ಇದಕ್ಕಿಂತಲೂ ಉತ್ತಮವಾದ ಮಂತ್ರವಿಲ್ಲ. ರಾಮನಾಮ ಮಹಿಮೆಯು ಅಗಮ್ಯವಾದುದು. ಅಷ್ಟಾಷರೀಮಂತ್ರದಲ್ಲಿ ಐದನೆಯವರ್ಣವನ್ನೂ, ಶಿವಪಂಚಾಕ್ಷರಿಯಲ್ಲಿ ಎರಡನೆಯ ವರ್ಣವನ್ನೂ ಸೇರಿಸಿದರೆ ‘ರಾಮ’ ಎಂಬ ಪದವಾಗುವುದು. ಇದೇ ಮುಕ್ತಿಪದದ ಸೋಪಾನವು. ರಾಜರ್ಷಿಯಾದ ಜನಕ ಚಕ್ರೇಶ್ವರನು ಈ ಮಂತ್ರವನ್ನು ಜಪಿಸಿ, ಯೋಗಿವರ್ಯನೆನಿಸಿಕೊಂಡಿರುವನು. ಇದಕ್ಕಿಂತಲೂ ಬೇರೆ ಮಂತ್ರರಾಜವಿಲ್ಲ.” ಎಂದು ಉಪದೇಶಿಸಲಾ ದಶರಥನು ಮಹಾಪ್ರಸಾದವೆಂದು, ಆತನ ಅಪ್ಪಣೆಯನ್ನು ಪಡೆದು, ತನ್ನ ಪಟ್ಟಣಕ್ಕೆ ಬಂದು ಸದಾಕಾಲವೂ ರಾಮಧ್ಯಾನದಲ್ಲಿಯೇ ಕಾಲವನ್ನು ಕಳೆಯುತಿದ್ದನು. ತರುವಾಯ ವರ್ಷಾಕಾಲವು ಬಂದು ಎಲ್ಲೆಲ್ಲಿಯೂ ಜಲಮಯವಾಗಿ ತೋರುತಲಿತ್ತು. ಆ ಮೇಲೆ ಶರತ್ಕಾಲವು ಬಂತು. ರಾಜರುದಿಗ್ವಿಜಯಕ್ಕೆ ಹೊರಡುವಕಾಲವು ಇದೇ! ಈ ಕಾಲದಲ್ಲಿ ದಶರಥನು ದಿಗ್ವಿಜಯಕ್ಕಾಗಿ ಹೊರಟು ದೇಶಗಳ ಮೇಲೆ ಬರಲು, ಎಲ್ಲಾ ರಾಜರುಗಳೂ ಆತನ ಪರಾಕ್ರಮಕ್ಕೆ ಹೆದರಿ, ಕಾಣಿಕೆ ಕಪ್ಪಗಳನ್ನು ಕೊಟ್ಟು ಅಧೀನರಾಗುತ್ತಾ ಬಂದರು. ಆ ರಾಜನು ನಾನಾ ದೇಶಾಧೀಶ್ವರರನ್ನು ವಶಮಾಡಿಕೊಂಡು ಮುಂದಕ್ಕೆ ಹೊರಡಲು, ಸಾರಥಿಯಾದ ಸುಮಂತನು “ಜೀಯಾ! ಮುಂದೆ ದಕ್ಷಿಣ ಕೋಸಲರಾಜ್ಯವು ಸಿಕ್ಕುವುದು; ಅತ್ರಿಮಹರ್ಷಿಗಳು ಹೇಳಿದ ಕನ್ಯೆಯು ಈ ದೇಶಾಧೀಶ್ವರನ ಪುತ್ರಿಯೇ!” ಎಂದು ಜ್ಞಾಪಕವನ್ನು ಕೊಡಲು, ಮಂತ್ರಿಪುರೋಹಿತರನ್ನು ಕರೆಯಿಸಿ, ತನ್ನ ಮನೋಭೀಷ್ಟವನ್ನವರಿಗೆ ತಿಳುಹಿ, ಮುಂದಿನ ಕರ್ತವ್ಯವಾವುದೆಂದು ಕೇಳಲು ಅವರು ಆಲೋಚಿಸಿ, ಮೊದಲು ಆ ರಾಜನಿಗೆ ತಮ್ಮ ಅಭಿಪ್ರಾಯವನ್ನು ಹೇಳಿಕಳುಹಿ, ಆತನ ಕೋರಿಕೆಯನ್ನು ತಿಳಿದು, ತರುವಾಯ ಯೋಚಿಸುವುದು ಯುಕ್ತವೆಂದು ತಿಳುಹಲು, ಇದೇ ಉತ್ತಮ ಮಾರ್ಗವೆಂದು ನಿಶ್ಚಯಿಸಿ, ಅಲ್ಲಿಂದ ಹಿಂದಿರುಗಿ ತನ್ನ ರಾಜಧಾನಿಗೆ ಬಂದು ಸೇರಿದನು.

---



## ೫ ನೆಯ ಪ್ರಕರಣ.

ದಕ್ಷಿಣಕೋಸಲ ದೇಶಕ್ಕೆ ಭಾನುಮಂತನೆಂಬುವನು ಅಧಿಪತಿಯಾಗಿದ್ದನು. ಆತನಿಗೆ ಚಂದ್ರಭಾಗಾದೇವಿಯೆಂಬುವಳು ಪಟ್ಟದರಸಿಯಾಗಿದ್ದಳು. ಈ ದಂಪತಿಗಳಿಗೆ ಬಹುಕಾಲದ ತನಕ ಸಂತಾನವಾಗಲಿಲ್ಲ. ಅನೇಕ ವ್ರತಪೂಜಾದಿಗಳನ್ನೂ, ಯಜ್ಞಗಳನ್ನೂ, ದಾನಧರ್ಮಗಳನ್ನೂ ಮಾಡಿದರೂ ತಮ್ಮ ಕೋರಿಕೆಯು ಸಫಲವಾಗದ ಕಾರಣ ತುಂಬ ಚಿಂತಾಕ್ರಾಂತರಾಗಿದ್ದರು. ಒಂದುದಿನ ಚಂದ್ರಭಾಗಾದೇವಿಯು ತನ್ನ ಪತಿಯ ಸನ್ನಿಧಿಯಲ್ಲಿ ಕುಳಿತು “ಆರ್ಯ ಪುತ್ರನೇ! ಎಷ್ಟು ಐಶ್ವರ್ಯಗಳಿದ್ದರೂ ನಮಗೆ ಪುತ್ರಸಂಪತ್ತಿಯಿಲ್ಲದುದರಿಂದ ನಮ್ಮ ಸೌಖ್ಯಗಳೆಲ್ಲವೂ ನಿರರ್ಥಕಗಳೆನಿಸಿವೆ. ನಾನು ಆಟಪಾಟಗಳಲ್ಲಿ ಕೆಲವು ದಿನಗಳನ್ನೂ, ಮಕ್ಕಳನ್ನು ಹಡೆದು ಸಾಕುವುದು ಜಂಬಾಟವೆಂದು ಕೆಲವು ದಿನಗಳನ್ನೂ, ಕಳೆದೆನು. ಈಚೆಗೆ ಒರಗೆಯ ಹೆಂಗಸರು ತಮ್ಮ ಕೌಂಕುಳಲ್ಲಿ ಮಕ್ಕಳನೆತ್ತಿಕೊಂಡು ಮುದ್ದಾಡುತ್ತಿರುವುದನ್ನು ನೋಡಿ ನನಗೆ ಬಲು ನಾಚಿಕೆಯುಂಟಾಗಿದೆ. ಉಣ್ಣಲಿಕ್ಕೂ ಉಡಲಿಕ್ಕೂ ನಮಗೆ ದೇವರು ಬೇಕಾದಷ್ಟು ಕೊಟ್ಟಿದ್ದರೂ ಮಕ್ಕಳನ್ನು ಮುದ್ದಾಡುವ ಭಾಗ್ಯವನ್ನು ದಯಪಾಲಿಸದೆ ಇರುವುದರಿಂದ ನನ್ನ ಬಾಳು ಕಾನನದ ಬೆಳದಿಂಗಳಂತೆ ನಿರರ್ಥಕವಾಯಿತು. ಜನರಿಂದ ಇವಳು ಬಂಜೆಯೆಂದೆನಿಸಿಕೊಂಡು ಬಾಳುವುದಕ್ಕಿಂತ ಪ್ರಾಣತ್ಯಾಗವೇ ಲೇಸೆಂದು ಭಾವಿಸಬೇಕು.” ಎಂದು ಬಿನ್ನವಿಸಲಾ ಮಹೀರಮಣನೂ ಕಣ್ಣೀರ್ಗರೆದು “ಪ್ರಿಯಳೇ! ನಿನ್ನ ಚಿಂತೆಯ ವಿಷಯವು ನನಗೆ ಚೆನ್ನಾಗಿ ಗೊತ್ತಿದೆ; ನಿನಗಿಂತಲೂ ಹೆಚ್ಚಾಗಿ ಕೊರಗುತ್ತಿದ್ದೇನೆ. ಅಪುತ್ರರಿಗೆ ಗತಿಯಿಲ್ಲ. ಅವರ ಪಿತೃಗಳೆಲ್ಲರೂ ನರಕದಿಂದ ಉತ್ತೀರ್ಣರಾಗಲು ಅವಕಾಶವಿಲ್ಲವೇ ಇಲ್ಲ. ರಾಜ್ಯಕ್ಕೆ ನನ್ನ ತರುವಾಯ ರಕ್ಷಕರಿಲ್ಲದೆ ಹೋಗುವರು. ಆದುದರಿಂದ ಪುತ್ರಪ್ರಾಪ್ತಿಗಾಗಿ ನಾನು ಕಾಡಿಗೆಹೋಗಿ ಶ್ರೀಮನ್ನಾರಾಯಣನನ್ನು ಕುರಿತು ತಪಸ್ಸು ಮಾಡಿ, ಫಲವಂ ಪಡೆದು ಬರುವೆನು. ನೀನು ಅದುವರೆಗೂ ಇಲ್ಲಿಯೇ ಇದ್ದುಕೊಂಡು ಹರಿಪೂಜೆಗಳನ್ನು ಮಾಡುತ್ತಿರು.” ಎಂದು ಹೇಳಲಾ ಸಾಧ್ವೀಮಣಿಯು “ಪ್ರಾಣಕಾಂತಾ! ನನ್ನ ಪಾಣಿಗ್ರಹಣಕಾಲದಲ್ಲಿ ಧರ್ಮಾರ್ಥ ಕಾಮಗಳಲ್ಲಿಯೂ ‘ನಾತಿಚರಾಮಿ’ ಎಂದು ಮಾಡಿದವಾಗ್ದಾನವನ್ನು ಮರತೆಯಾ? ಪತ್ನೀ ಸಹಿತನಾಗಿ ತಪಸ್ಸು ಮಾಡುವುದರಿಂದ ಫಲವು ದ್ವಿಗುಣವಾಗುವುದಲ್ಲವೆ? ರಾಜ್ಯವನ್ನು ಮಂತ್ರಿಗಳ ಅಧೀನ ಮಾಡಿ, ನನ್ನನ್ನು ಕರೆದುಕೊಂಡು ತಪಸ್ಸಿಗೆ ಹೊರಡು. ಕಾಡಿನಲ್ಲಿ ನಿನ್ನನ್ನು ಉಪಚರಿಸುತ್ತಾ ನಿನ್ನ ತಪಸ್ಸಿಗೆ ಸಹಾಯಕಳಾಗಿರುವೆನು.” ಎನಲಾರಾಜನು ಹಾಗೆಯೇ ಆಗಲಿ ಎಂದು ಒಡಂಬಟ್ಟು ರಾಜ್ಯವನ್ನು ಮುಖ್ಯಾಮಾತ್ಯನಿಗೊಪ್ಪಿಸಿ, ಪತ್ನೀಸಹಿತನಾಗಿ ಅರಣ್ಯಕ್ಕೆ ಹೋಗಿ,

Digitized by ROJA MUTHIAH RESEARCH LIBRARY

ಶುಚಿಪ್ರದೇಶದಲ್ಲಿ ಜಿತೇಂದ್ರಿಯನಾಗಿ ನಿಯಮದಿಂದ ಲಕ್ಷ್ಮೀಕಾಂತನನ್ನು ಧ್ಯಾನ ಮಾಡುತ್ತಾ ಇದ್ದನು. ಕೆಲವು ದಿನಗಳ ಮೇಲೆ ನಾರಾಯಣನು ಇಂದಿರಾಸಹಿತನಾಗಿ ಪ್ರತ್ಯಕ್ಷನಾಗಿ "ಎಲೈ ರಾಜೇಂದ್ರನೇ! ನಿನ್ನ ಭಕ್ತಿಗೆ ಮೆಚ್ಚಿದೆನು. ನಿನಗೆ ಬೇಕಾದ ವರವನ್ನು ಬೇಡು." ಎನಲಾ ಭಾನುಮಂತನು ದಿಗ್ಗನೆ ಎದ್ದು ಸಾಷ್ಟಾಂಗಪ್ರಣಾಮವಂಗೆಯ್ದು ಲೋಕೇಶ್ವರಾ! ನೀನೇ ಪ್ರತ್ಯಕ್ಷನಾಗಿ ಬಂದು, ಏನು ಬೇಕೆಂದು ಕೇಳುವಾಗ ಕಾಮ್ಯಫಲಗಳಗಳನ್ನು ಬೇಡುವವನು ಹುಚ್ಚನೇ ಸರಿ. ಆದರೂ ನಮ್ಮಂತಹ ಅಜ್ಞರು ತಮ್ಮ ಬಯಕೆಗಳನ್ನು ಪಡೆಯಬೇಕೆಂದು ಅಪೇಕ್ಷಿಸುವುದು ಸಹಜವಷ್ಟೆ! ನಾನು ಸಂತಾನಾರ್ಥಿಯಾಗಿ ಕಾಂತೆಯೊಡನೆ ನಿನ್ನನ್ನು ಕುರಿತು ತಪಸ್ಸು ಮಾಡಿದೆನು. ಆದುದರಿಂದ ನಿಷ್ಕಾಮಿಯೆಂದು ಹೇಳಲಾರೆನು. ನಿನ್ನನ್ನು ಕಂಡ ಮೇಲೆ ತುಚ್ಛವಾದ ಬಯಕೆಗಳನ್ನು ಬೇಡಲೊಲ್ಲೆನು. ನೀನು ನನ್ನ ಧರ್ಮಪತ್ನಿಯಲ್ಲಿ ಪುತ್ರನಾಗಿ ಜನಿಸಬೇಕೆಂದು ಬೇಡುತ್ತೇನೆ. ಇದರಿಂದ ನಮಗೆ ಇಹಪರಗತಿಗಳು ಸುಕರವಾಗುವುವು." ಎಂದುದನ್ನು ಕೇಳಿ ಶ್ರೀ ರಮಣನು ಮುಗುಳುನಗೆಯಿಂದ "ಎಲೈ ರಾಜನೇ! ನಾನು ನಿನಗೆ ಮಗನಾಗಿ ಹುಟ್ಟಲು ಆಗಲಾರದು. ನಿನ್ನ ಮಗಳಿಗೆ ಮಗನಾಗಿ ಹುಟ್ಟಿ ನಿಮಗೆ ಶುಭಗಳನ್ನುಂಟು ಮಾಡುವೆನು. ನೀನು ಕೋರಿದ ಹಾಗೆ ನಿಮ್ಮಿಬ್ಬರಿಗೆ ಒಬ್ಬ ಪುತ್ರಿಯನ್ನು ಅನುಗ್ರಹಿಸಿರುವೆನು." ಎಂದು ಹೇಳಿ ಅಂತರ್ಧಾನನಾದನು. ಆದಂಪತಿಗಳು ಈಶ್ವರಸಾಕ್ಷಾತ್ಕಾರಕ್ಕೂ ಆತನ ಕರುಣಾವಿಶೇಷಕ್ಕೂ ಆಶ್ಚರ್ಯಗೊಂಡು, ತಮ್ಮ ಬಯಕೆಯು ಕೈಗೂಡಿದುದಕ್ಕಾಗಿ ಬಹು ಸಂತೋಷಪಟ್ಟು ಹಿಂದಿರುಗಿ ತಮ್ಮ ನಗರಿಗೆ ಬಂದು ಎಂದಿನಂತೆ ಸುಖದಿಂದಿದ್ದರು.

ಕೆಲವು ದಿನಗಳು ಕಳೆಯುವದರಲ್ಲಿ ಚಂದ್ರಭಾಗಾದೇವಿಯು ಗರ್ಭವನ್ನು ಧರಿಸಿ, ಒಬ್ಬ ಮಗನನ್ನೂ, ಒಬ್ಬ ಮಗಳನ್ನೂ ಹಡೆದಳು. ಮಹಾರಾಜನು ಅತ್ಯುತ್ಸವದಿಂದಲಾಮಕ್ಕಳಿಗೆ ಜಾತಕರ್ಮವನ್ನು ಮಾಡಿಸಿ, ಪುತ್ರನಿಗೆ ಭಾನುಮಂತನೆಂತಲೂ, ಪುತ್ರಿಗೆ ಕೌಸಲ್ಯೆಯೆಂತಲೂ, ನಾಮಕರಣವನ್ನು ಮಾಡಿಸಿ, ಬಹು ಸಂತೋಷದಿಂದ ಅವರನ್ನು ಸಾಕುತ್ತಾ ಬಂದನು. ಆ ಮಕ್ಕಳು ದಿನದಿನ ಪ್ರವರ್ಧಮಾನರಾಗಿ ಬೆಳೆಯುತ್ತಾ ಬಂದರು. ಕೌಸಲ್ಯೆಗೆ ಬಾಲ್ಯವು ಕಳೆದು ಯೌವನವು ತಲೆದೋರುತ್ತಾ ಬಂದಿತು. ಪ್ರಾಪ್ತವಯಸ್ಕಳಾದ ಕನ್ಯೆಗೆ ತಕ್ಕ ವರನನ್ನು ಹುಡುಕಬೇಕೆಂದು ತಾಯಿತಂದೆಗಳು ಯೋಚಿಸುತ್ತಿದ್ದರು. ಒಂದು ದಿನ ಅರಸನು ಒಡ್ಡೋಗಲದಲ್ಲಿ ಕುಳಿತಿರುವಾಗ ಅತ್ರಿಮಹರ್ಷಿಗಳು ಅಲ್ಲಿಗೆ ಬಂದರು. ರಾಜನು ಅವರನ್ನು ಸತ್ಕರಿಸಿ ಅವರ ಕ್ಷೇಮ ಸಮಾಚಾರವನ್ನು ವಿಚಾರಿಸಿದ ತರುವಾಯ ತನ್ನ ಮುದ್ದು ಕುವರಿಯನ್ನು ಕರೆಯಿಸಿ, ಆ ಮುನೀಂದ್ರರ ಪಾದದಲ್ಲಿ ನಮಸ್ಕಾರ ಮಾಡಿಸಿ, "ಸ್ವಾಮಿ! ತಾವು ಎಲ್ಲವನ್ನೂ ಬಲ್ಲವರು. ಭೂಲೋಕದಲ್ಲಿ ಚೆನ್ನೆಯಾದ ಈ ಕನ್ಯೆಗೆ ತಕ್ಕವರನು ಎಲ್ಲಿರುವನೋ ತಿಳಿದು ಹೇಳಬೇಕೆಂದು" ಪ್ರಾರ್ಥಿಸಿದನು.

Digitized by ROJA MUTHIAH RESEARCH LIBRARY



ಆಗಲಾ ಅತ್ರಿಮಹರ್ಷಿಯು ಸ್ವಲ್ಪ ಹೊತ್ತು ಚಿಂತಿಸಿ, "ಎಲೈ ಭೂಕಾಂತನೇ! ಮಾನ್ಯೆಯಾದ ಈ ಕನ್ಯೆಗೆ ಅಯೋಧ್ಯಾಧಿಪತಿಯಾದ ದಶರಥನೆಂಬ ರಾಜನ್ಯನೇ ಅರ್ಹನಾದ ವರನೆಂದು ತಿಳಿದಿರುವೆನು. ಆತನ ಯೋಗ್ಯತೆಯನ್ನು ನೀನು ತಿಳಿದೇ ಇರುವೆ. ಆದರೂ ಈ ಕನ್ಯೆಗೆ ತಿಳಿಯುವಂತೆ ವಿವರಿಸುವೆನು ಕೇಳು:—ಶತ್ರುರಾಜರು ಆ ಪಟ್ಟಣವನ್ನು ಪ್ರವೇಶಿಸುವುದಕ್ಕೆ ಅಸಾಧ್ಯವಾದುದರಿಂದಲೇ ಅದಕ್ಕೆ ಅಯೋಧ್ಯೆಯೆಂಬ ಹೆಸರು ಬಂದಿರುವುದು. ಆ ಪುರದ ರಾಜವೀಧಿಗಳು ವಿಶಾಲವಾಗಿಯೂ ರಮಣೀಯವಾಗಿಯೂ ನಿರ್ಮಲವಾಗಿಯೂ ಇರುವವು. ಅಲ್ಲಿರುವ ಬ್ರಾಹ್ಮಣರೆಲ್ಲರೂ ವೇದಾಧ್ಯಯನ ಸಂಪನ್ನರು, ಸಚ್ಚರಿತರು, ಪಾಪಭೀರುಗಳು, ಸದಾಚಾರಪರರು; ಕ್ಷತ್ರಿಯರೆಲ್ಲರೂ ವೀರರಾಗಿಯೂ, ಉದಾರರಾಗಿಯೂ, ಗಂಭೀರರಾಗಿಯೂ, ಶುಚಿಗಳಾಗಿಯೂ ಇರುವರು. ಅವರು ಪ್ರಜೆಗಳನ್ನು ತಮ್ಮ ಪ್ರಜೆಗಳಂತೆಯೇ ಭಾವಿಸುವರು. ಚಾಡಿಮಾತುಗಳಿಗೆ ಎಂದಿಗೂ ಕಿವಿಕೊಡರು. ಪರಸ್ತ್ರೀಯರನ್ನು ಒಡಹುಟ್ಟಿದವರಂತೆ ಕಾಣುವರು. ಅವರನ್ನು ಯುದ್ಧದಲ್ಲಿ ಎದುರಿಸುವ ಶತ್ರುಗಳು ರಣಪದಕ್ಕೆ ಆದಿಯಲ್ಲಿ ಶಮಕಾರಗಳಲ್ಲಿ ಯಾವುದಾದರೂ ಒಂದು ವರ್ಣವನ್ನು ಸೇರಿಸದೆ ಹಿಂದಿರುಗರು. ಅಲ್ಲಿಯ ವೈಶ್ಯರು ವ್ಯಾಪಾರದಲ್ಲಿ ಚತುರರು; ಬಡ್ಡಿಯ ಆಸೆಗಾಗಿ ಬಡವರ ಮನೆಮಾರುಗಳನ್ನೂ, ಹೊಲಗದ್ದೆಗಳನ್ನೂ ಮಾರಿಸಿ, ಅವರನ್ನು ನಿರ್ಗತಿಕರನ್ನಾಗಿ ಮಾಡತಕ್ಕವರಲ್ಲ. ಪ್ರಾಮಾಣಿಕತೆಯಿಂದ ವ್ಯಾಪಾರಮಾಡಿ, ಕೋಟೀಶ್ವರರೆನಿಸಿಕೊಂಡಿರುವರು. ಶೂದ್ರರು ಸ್ವಲ್ಪವೂ ಆಲಸ್ಯವಿಲ್ಲದೆ ಕೃಷಿಗೋರಕ್ಷಣೆಗಳನ್ನು ಮಾಡಿಕೊಂಡು ಉತ್ತಮ ವರ್ಣದವರಲ್ಲಿ ಭಕ್ತಿಯನಿಟ್ಟುಕೊಂಡು ಸೇವಿಸುತ್ತಿರುವರು. ಅಂತಹ ರಾಜಧಾನಿಯಲ್ಲಿ ಸೂರ್ಯಕುಲ ಪ್ರದೀಪನಾದ ದಶರಥನೆಂಬ ಕ್ಷತ್ರಿಯೋತ್ತಮನು ರಾಜ್ಯಪರಿಪಾಲನೆ ಮಾಡುತ್ತಿರುವನು. ಆ ದಶರಥನು ತೇಜದಲ್ಲಿ ದ್ವಾದಶರಥನಾಗಿಯೂ ಸೌಂದರ್ಯದಲ್ಲಿ ದಶರಥನಾಗಿಯೂ ಸಂತತಾರ್ಜಿತ ದಶರಥನಾಗಿಯೂ ಇರುವನು. ಭೂಲೋಕದಲ್ಲಿ ತೇಜೋನಿಧಿಯಾದ ಆ ರಾಜನನ್ನು ನೋಡಿ, ಮಧ್ಯಮಲೋಕದ ಕುಮುದಾಕ್ಷಿಯರೆಲ್ಲರೂ ಯಾವಾಗಲೂ ಕಣ್ಣುಮುಚ್ಚದೆ ಆತನಲ್ಲಿ ಮನವಿಟ್ಟು ಪ್ರೀತಿಸುತ್ತಿದ್ದರು. ಆತನು ಆಜಾನುಬಾಹುವಾಗಿಯೂ, ವಿಶಾಲವಕ್ಷನಾಗಿಯೂ ಸ್ಫುರದ್ರೂಪಿಯಾಗಿಯಾಗಿಯೂ ಇರುವನು. ಭೂದೇವೇಂದ್ರನಾದ ಆತನನ್ನು ನೋಡಿ, ಅಗ್ನಿಯು ನಾಚಿಕೊಂಡು ಸೂರ್ಯನನ್ನು ಸೇರಿದುದರಿಂದ ಎಲ್ಲರೂ ಸೂರ್ಯನನ್ನು ಅಗ್ನಿಗರ್ಭನೆಂದು ಕರೆಯುವರು. ಗಂಡನು ತನ್ನನ್ನು ಹೊಡೆದರೆ ಹೆಂಡತಿಯು ಮಗುವನ್ನು ಹೊಡೆಯುವಂತೆ ಈತನ ಶತ್ರುಸಂಘವು ಇವನ ಬಾಣಹತಿಯಿಂದ ದೇಹಗಳನ್ನು ಬಿಟ್ಟು ಸುರಲೋಕ ಸುಂದರಿಯರನ್ನು ಪೀಡಿಸುತ್ತಿರುವುದು. ಇಂತಹ ಜಗದ್ವಿಖ್ಯಾತನಾದ ಭೂಕಾಂತನನ್ನು ನಿನ್ನ ಜಾಮಾತನನ್ನಾಗಿ ಮಾಡಿಕೊಳ್ಳತಕ್ಕುದೆಂದು ಅತ್ರಿಮುನಿಯು

ಹೇಳಿದುದನ್ನು ಕೇಳಿ ಭಾನುಮಂತನು "ಮಹರ್ಷಿಯೇ! ತಮ್ಮ ಅಪ್ಪಣೆಯಂತೆಯೇ ವರ್ತಿಸುವೆನು. ತಮ್ಮ ದರುಶನದಿಂದ ನನ್ನ ಜನ್ಮವು ಸಫಲವಾಯಿತೆಂದು" ಆತನನ್ನು ಕೊಂಡಾಡಿ ಸತ್ಕರಿಸಿ ಕಳುಹಿದನು. ಕೌಸಲ್ಯೆಯು ದಶರಥನೇ ತನ್ನ ಮನೋನಾಥನೆಂದು ಸಂಕಲ್ಪಿಸಿ, ಆತನಲ್ಲಿ ಪ್ರೇಮವನಿಟ್ಟುಕೊಂಡಿದ್ದಳು. ಹೀಗಿರುವಲ್ಲಿ ಒಂದಾನೊಂದು ವಸಂತಕಾಲವು ಬಂತು. ಆಗ ಕೌಸಲ್ಯೆಯು ಸಖಿಯರಿಂದೊಡಗೂಡಿ, ವನವಿಹಾರ ಮಾಡಬೇಕೆಂದೆಳಸಿ, ಉದ್ಯಾನವನಕ್ಕೆ ಹೋದಳು. ಅಲ್ಲಿ ಗಿಡಗಳೆಲ್ಲವೂ ಚಿಗುರುಗಳಿಂದಲೂ ಹೂಗಳಿಂದಲೂ, ಹಣ್ಣುಗಳಿಂದಲೂ, ಮನೋಜ್ಞಗಳಾಗಿ ಕಂಗೊಳಿಸುತಿದ್ದುವು. ಆ ಬಾಲಾಮಣಿಯು ಉದ್ಯಾನವನದ ಸೊಬಗನ್ನು ನೋಡುತ್ತಾ ಲೀಲೆಯಿಂದ ಹಗಲನೆಲ್ಲ ಕಳೆದು ಸಂಧ್ಯಾಕಾಲವಾಗುತ್ತಲೇ ತನ್ನ ಅತ:ಪುರಕ್ಕೆ ಹೊರಡಲು ಯತ್ನಿಸಿದಳು. ಅಷ್ಟರಲ್ಲಿ ಕೌಸಲ್ಯಾನುರಕ್ತನಾದ ದಶರಥನು ಅಲ್ಲಿಗೆ ಬಂದು ಕಾಣಿಸಿಕೊಂಡನು. ಅರಮಗಳ ಸಖಿಯರು ಕಾರಣಾಂತರಗಳನ್ನು ಹೇಳಿಕೊಂಡು ಓರೆಯಾಗಿ ಸರಿದರು. ಆಗಲಾಕೌಸಲ್ಯೆಯು ದಶರಥನನ್ನು ಕಂಡು ಅನುರಾಗಾತಿಶಯದಿಂದ ದಿಕ್ಕುತೋರದೆ ಸ್ತಬ್ಧಳಾಗಿನಿಂತಳು. ಸ್ವಲ್ಪಹೊತ್ತು ಹೀಗೆ ನಿಂತಿದ್ದು, ತರುವಾಯ ಆ ಮಹಾರಾಜನನ್ನು ಕುರಿತು. ಎಲೈ ಮಹಾರಾಯನೇ! ನನ್ನಲ್ಲಿ ಕರುಣಿಸಿ ಇಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳಬಹುದಲ್ಲವೇ! ನಿನ್ನ ಕೋಮಲಾಂಘ್ರಿಗಳು ಧೂಳಿ ಧೂಸರಿತಗಳಾಗಿವೆ! ಎಷ್ಟುದೂರದಿಂದ ಇಲ್ಲಿಯತನಕ ನಡೆದು ಬಂದೆಯೋ ತಿಳಿಯದು. ಯಾವ ಭೂರಮಣಿಯು ನಿನ್ನನ್ನು ಪತಿಯಾಗಿ ವರಿಸಿರುವಳು? ನಿನ್ನ ನಾಮವು ಯಾವಸುವರ್ಣಾಕ್ಷರಗಳಿಂದ ಕೆತ್ತಲ್ಪಟ್ಟಿರುವುದು? ಏತಕ್ಕೋಸ್ಕರ ಇಷ್ಟುದೂರ ದಯಮಾಡಿಸಿದೆಯೋ ತಿಳಿಯಲಪೇಕ್ಷಿಸುತ್ತೇನೆ. ರಾಜಲಕ್ಷಣ ಲಕ್ಷಿಸನಾದ ತನ್ನನ್ನು ನೋಡಿ ನನ್ನ ಮನಸ್ಸು ಚಂಚಲಗೊಂಡಿದೆ. ನಾನು ದಕ್ಷಿಣಕೋಸಲಾಧಿಪತಿಯಾದ ಭಾನುಮಂತನ ಮಗಳು; ನನ್ನನ್ನು ಕೌಸಲ್ಯೆಯೆಂಬದಾಗಿ ಕರೆಯುವರು. ವಿಹಾರಕ್ಕಾಗಿ ಈ ಪ್ರಮದಾವನಕ್ಕೆ ಬಂದೆನು. ಪುಣ್ಯವಿಶೇಷದಿಂದ ನಿನ್ನ ದರ್ಶನವಾಯಿತು. ಹೇಳಬಹುದಾಗಿದ್ದರೆ ನನ್ನಲ್ಲಿ ಅನುಗ್ರಹಿಸಿ, ಯಥಾರ್ಥವಾದುದನ್ನು ತಿಳಿಸಬಹುದೆಂದು ಹೇಳಿ ಸುಮ್ಮನಾದಳು. ಈ ಮಾತುಗಳನ್ನು ಕೇಳಿ ದಶರಥನು ಬಲು ಸಂತೋಷಗೊಂಡು:— ಎಲೌ ತನ್ನಂಗಿಯೇ! ನಾನು ಸೂರ್ಯಕುಲೋದ್ಭವನು. ಜನರು ನನ್ನನ್ನು ದಶರಥನೆಂದು ಹೆಸರಿಸುವರು. ನಿನ್ನ ಸೌಂದರ್ಯಾತಿಶಯವನ್ನು ಲೋಕವೆಲ್ಲವೂ ಕೊಂಡಾಡುತ್ತಿರುವುದನ್ನು ಕಿವಿಗಳಲ್ಲಿ ಕೇಳಿದಣಿಯದೆ, ಕಣ್ಣಾರೆ ನೋಡಬೇಕೆಂದು ಇಲ್ಲಿಗೆ ಬಂದೆನು. ನೀನು ನನ್ನನ್ನು ವರಿಸುವುದಾದರೆ, ನಿಮ್ಮ ತಂದೆಯನ್ನು ಬೇಡಿ, ನಿನ್ನ ಪಾಣಿಗ್ರಹಣವನ್ನು ಮಾಡುವೆನು ಎಂದನು. ಆಗಲಾಕೌಸಲ್ಯೆಯು "ಮೀಯಲಿಕ್ಕೆ ಹೋದ ತೀರ್ಥವು ಇದುರಿಗೆ ಬಂದಂತೆಯೂ, ತೊಳಲರಸುವ ಬಳ್ಳಿ ಕಾಲ್ತೊಡುಕಿದಂತೆಯೂ, ನನ್ನ



ಭಾಗ್ಯವಶದಿಂದ ನೀವೇ ಇಲ್ಲಿಗೆ ಬಂದುದು ಉತ್ತಮವಾಯಿತು. ನಾನು ಕುಲವೆಣ್ಣಾದುದರಿಂದ ತಾಯಿತಂದೆಗಳ ಅನುಮತಿಯಿಲ್ಲದೆ ಪತಿವರಣವು ಯೋಗ್ಯವೆನಿಸದು. ನಿಮ್ಮಂತಹ ಮಹನೀಯರು ಚೋರವೃತ್ತಿಯಲ್ಲಿ ಈ ರೀತಿಯಾಗಿ ಒಂದು ಬಲಾತ್ಕರಿಸುವುದು ನಿಮ್ಮ ಘನತೆಗೆ ಕುಂದದನ್ನೂ, ಶೌರ್ಯಕ್ಕೆ ಅಪಯಶಸ್ಸನ್ನೂ, ನನಗೆ ಕಳಂಕವನ್ನೂ ತರುವುದೆಂದು ಹೆದರುತ್ತೇನೆ. ನನ್ನ ತಾಯಿತಂದೆಗಳನ್ನು ಬೇಡಿ ನನ್ನನ್ನು ಕೈಪಿಡಿದರೆ ನಿಮ್ಮ ಪಾದಸೇವೆಯನ್ನು ಮಾಡಲು ದಾಸಿಯು ಸಿದ್ಧಳಾಗಿರುವಳು." ಎಂದು ಕೈ ಮುಗಿದು ಮುಖವನ್ನು ಹಿಂದಿರುಗಿಸಿಕೊಂಡು ಸಂದಳು. ಇವಳು ಮುಂದು ಮುಂದಕ್ಕೆ ಅಡಿಯನಿಡುತಿದ್ದರೂ, ಇವಳ ಮನಸ್ಸು ಮಾತ್ರ ಹಿಂದಕ್ಕೆ ಸೆಳೆಯುತಿದ್ದಿತು. ಅತಿ ಪ್ರಯಾಸದಿಂದ ಸಖಿಯರೊಡಗೂಡಿ ನಡೆದು ಅಂತ:ಪುರವನ್ನು ಸೇರಿದಳು. ಆ ಬಾಲೆಯು ಆ ರಾತ್ರಿಯೆಲ್ಲವೂ ವಿರಹವೇದನೆಯಲ್ಲಿಯೇ ಬಹಳವಾಗಿ ಬಳಲುತಿದ್ದಳು. ಅಷ್ಟರಲ್ಲಿ ಪ್ರಿಯಸಖಿಯಾದ ಬುದ್ಧಿಮತಿಯು ಪಂಜರದಲ್ಲಿ ಬೆಳೆಯಿಸಿದ್ದ ಲೀಲಾಶುಕವನ್ನು ದಶರಥನ ಬಳಿಗೆ ಕಳುಹಿ, ಆ ರಾಜಕುವರಿಯ ವಿರಹವ್ಯಥೆಯನ್ನು ತಿಳಿಸಿ ಕರೆಯಿಸುವೆನೆಂದು ಸಮಾಧಾನವನ್ನು ಹೇಳಿ, ಆ ಗಿಳಿಯನ್ನು ಕರೆದು ಅರಗುವರಿಯ ಕಿರುವೆರಳಿನುಂಗುರವನದರಕ್ಕೈಗೆ ಕೊಟ್ಟು, ಎಲೈ ಚತುರಮತಿಯೇ! ನೀನು ದಶರಥನ ಬಳಿಗೆಯ್ದಿ ನಮ್ಮೊಡತಿಯ ವಿರಹ ದು:ಖವನ್ನು ತಿಳಿಸಿ, ಇದನ್ನು ಪರಿಹರಿಸುವ ಪ್ರಯತ್ನವನ್ನು ಮಾಡಿ ಬಾರೆಂದು ಕಳುಹಿದಳು. ಆ ಶುಕವು ವಾಯುವೇಗದಿಂದ ಬಂದು ಅಂತಃಪುರವನೆಯ್ದಿ ಮಹಾರಾಜನನ್ನು ಕಂಡು ಕೈ ಮುಗಿದುಃ—ಜೀಯಾ! ನಾನು ಕೌಸಲ್ಯೆಯಿಂದ ಕಳುಹಲ್ಪಟ್ಟಿರುವೆನು. ನಿನ್ನ ದರ್ಶನವಾದಾಗಲಿಂದಲೂ ಆಕೆಯು ನಿನ್ನಲ್ಲಿ ಅನುರಕ್ತಳಾಗಿ ವಿರಹವ್ಯಥೆಯಲ್ಲಿ ಕೊರಗುತ್ತಿರುವಳು. ಶರಣಾಗತ ಪರಿಪೋಷಕನೆಂದು ಬಿರುದನಾಂತ ನೀನು ಆ ತರುಣಿಯ ಕರವಿಡಿದು ಈ ವ್ಯಥೆಯನ್ನು ಪರಿಹರಿಸಬೇಕೆಂದರುಹಿ, ತಾನು ತಂದ ಉಂಗುರವನ್ನವನಕ್ಕೈಗೊಪ್ಪಿಸಲು, ಆ ರಾಯನು ಗಿಳಿಯನ್ನು ಕುರಿತು, ಎಲೈ ಕೀರರಾಜಾ! ನಾನೂ ಇದೇ ಚಿಂತೆಯಲ್ಲಿ ಮಗ್ನನಾಗಿರುವೆನು. ಕನ್ನೆಯನ್ನು ನನಗೆ ಕೊಟ್ಟು ಮದುವೆ ಮಾಡಬೇಕೆಂದು ಅವಳ ತಂದೆಯಾದ ಭಾನುಮಂತನ ಬಳಿಗೆ ಮಂತ್ರಿಪುರೋಹಿತರನ್ನು ಕಳುಹಿರುವೆನು. ಅವರ ಸಮ್ಮತಿಯು ಬಂದೊಡನೆಯೇ ಹೊರಟು ಬಂದು ಕೌಸಲ್ಯೆಯ ದು:ಖವನ್ನು ಪರಿಹರಿಸುವೆನೆಂದು ಹೇಳಿ ತನ್ನ ಬೆರಳಿನುಂಗುರವನ್ನು ಗುರುತಿಗಾಗಿ ಅದರ ಕೈಯಲ್ಲಿ ಕೊಟ್ಟು ಕಳುಹಿದನು. ದಕ್ಷಿಣಕೋಸಲಕ್ಕೆ ಹೋಗಿದ್ದ ಮಂತ್ರಿ ಪುರೋಹಿತರು ಭಾನುಮಂತನನ್ನು ಕಂಡು ದಶರಥನ ಇಷ್ಟವನ್ನು ತಿಳಿಸಲಾತನು ಸಂತುಷ್ಟ ಹೃದಯನಾಗಿ ತನ್ನ ಸತಿಯಾದ ಚಂದ್ರಭಾಗಾದೇವಿಯೊಡನೆ ಆಲೋಚಿಸಿ, "ರೋಗಿಬಯಸಿದುದೂ ಹಾಲೋಗರ, ವೈದ್ಯಹೇಳಿದುದೂ ಹಾಲೋಗರ" ಎಂಬ ಗಾದೆಯಂತೆ ತಮ್ಮ ಕೋರಿಕೆಯು ಸಫಲವಾಯಿತೆಂದು ತಿಳಿದು, ತತ್

Digitized by ROJA MUTHIAH RESEARCH LIBRARY

ಕ್ಷಣದಲ್ಲಿಯೇ ಪುರೋಹಿತರನ್ನು ಕರೆಯಿಸಿ ವಿವಾಹಕ್ಕೆ ಶುಭಲಗ್ನವನ್ನು ನಿಶ್ಚಯಿಸಿ ಲಗ್ನಪತ್ರಿಕೆಯನ್ನು ಬರೆಯಿಸಿ, ಅಯೋಧ್ಯೆಯಿಂದ ಬಂದಿದ್ದ ಮಂತ್ರಿಪುರೋಹಿತರ ಜತೆಯಲ್ಲಿ ತನ್ನ ಪುರೋಹಿತನನ್ನು ಕಳುಹಿದನು. ಅವರು ತ್ವರೆಯಲ್ಲಿ ಬಂದು, ಮಹಾರಾಜನನ್ನು ಕಂಡು, ತಾವು ಹೋಗಿ ಬಂದ ಸಮಾಚಾರವನ್ನು ಸವಿಸ್ತಾರವಾಗಿ ವಿವರಿಸಿ, ಲಗ್ನಪತ್ರಿಕೆಯನ್ನು ಕೈಗೆ ಕೊಟ್ಟರು. ಆಗ ದಶರಥನು ಬಹು ಸಂತೋಷಪಟ್ಟು ವಿವಾಹ ಮುಹೂರ್ತಕ್ಕೆ ದಿಬ್ಬಣವನ್ನು ಹೊರಡಿಸಲು ಏರ್ಪಡಿಸಿ, ತಕ್ಕ ಸನ್ನಾಹಗಳನ್ನು ಮಾಡಿಕೊಂಡು ಪುರಜನಪರಿಜನ ಬಂಧುಬಳಗಗಳೊಡನೆ ದಕ್ಷಿಣಕೋಸಲದೇಶಕ್ಕೆ ತೆರಳಲನುವಾದನು.

---

## ೬ ನೆಯ ಪ್ರಕರಣ.

ಲಂಕಾದ್ವೀಪವನ್ನು ರಾವಣನೆಂಬ ರಾಕ್ಷಸನು ಆಳುತ್ತಿದ್ದನು. ದೇವತೆಗಳು ಆತನ ಬಾಧೆಯನ್ನು ತಾಳಲಾರದೆ ತಮ್ಮ ಪತ್ನೀಸಹಿತರಾಗಿ, ವಾಕ್ತಾಳಗಳನ್ನು ಹಾಕುತ್ತಾ, ತಮ್ಮ ಮನೇ ಬಾಗಿಲುಗಳಿಗೆ ಕಾಳ (ಬೀಗ) ಗಳನ್ನು ಹಾಕಿಕೊಂಡು ಭೇತಾಳನು ಅಟ್ಟಿಕೊಂಡು ಬಂದಂತೆ ಗಾಬರಿಗೊಂಡು ಬಹುದೂರಕ್ಕೆ ಓಡಿಹೋಗಿ, ತಮ್ಮೊಡೆಯನಾದ ದೇವೇಂದ್ರನನ್ನು ಮುಂದಿಟ್ಟುಕೊಂಡು, ಅಷ್ಟದಿಕ್ಪಾಲಕರೊಡನೆ ವೇಷಾಂತರಗಳನ್ನು ಧರಿಸಿ, ಬ್ರಹ್ಮದೇವರ ಬಳಿಗೆ ಹೋಗಿ, ದಶಕಂಠನ ಹಾವಳಿಯನ್ನು ಅರಿಕೆಮಾಡಿಕೊಂಡರು. ಆಗಲಾ ಸುರಶ್ರೇಷ್ಠನು ರಾವಣನಿಗೆ ತಾನು ಕೊಟ್ಟ ವರಗಳನ್ನು ಹಿಂದಿರುಗಿಸುವುದು ತನ್ನಿಂದಾಗಲಾರದೆಂದು ಹೇಳಿ, ಅವರೆಲ್ಲರನ್ನೊಡಗೊಂಡು, ಕ್ಷೀರಸಾಗರಕ್ಕೆ ಹೋಗಿ ಅಲ್ಲಿ ಶೇಷಶಾಯಿಯಾಗಿ ಆನಂದಮಯನಾಗಿರುವ ಶ್ರೀಮನ್ನಾರಾಯಣನನ್ನು ಕಂಡು, ವಿನಯವಿನಮಿತ ಶಿರಸ್ಕರಾಗಿ, ವೇದವಾಕ್ಯಗಳಿಂದ ಆತನನ್ನು ಬಗೆಬಗೆಯಿಂದ ಸ್ತುತಿಸಿದರು. ಭಕ್ತಪರಾಧೀನನಾದ ವೈಕುಂಠವಾಸನು ಅವರ ಮೊರೆಯನ್ನು ಲಾಲಿಸಿ, ಪ್ರತ್ಯಕ್ಷನಾಗಿ ಬಂದು, ಪ್ರತಿಬ್ಬನ ಕ್ಷೇಮ ಸಮಾಚಾರವನ್ನೂ ವಿಚಾರಿಸಲಾಗಿ, ಅವರಲ್ಲಿ ಒಬ್ಬೊಬ್ಬರಾಗಿ ಮುಂದೆ ನಿಂದು ತಮ್ಮ ಕಷ್ಟಗಳನ್ನು ಹೇಳತೊಡಗಿದರು. ಆವರಲ್ಲಿ ಬ್ರಹ್ಮನು:—"ಸ್ವಾಮಿ! ನಾನು ಸದಾಕಾಲವೂ ರಾವಣನ ಆಸ್ಥಾನದ ಬಾಗಿಲಲ್ಲಿ ಕೂತಿದ್ದು, ರಾಕ್ಷಸರಿಗೆಲ್ಲ ಶುಭಲಗ್ನಗಳನ್ನು ಹೇಳುತ್ತಾ, ಅವರ ಮಕ್ಕಳು ಶ್ರೇಯೋವಂತರಾಗಿ ಬಾಳಬೇಕೆಂದು ಅವರವರ ಹಣೆಯಲ್ಲಿ ಬರೆಯುತ್ತಾ, ನನ್ನ ಹಣೇಬರಹವನ್ನು ನಿಂದಿಸಿಕೊಳ್ಳುತ್ತಾ ಇರುವೆನು." ಎಂದನು.



ಇಂದ್ರನು:—"ಎಲೈ ದಾನವಾಂತಕನೇ! ನಿನ್ನ ದಯಾವಿಶೇಷದಿಂದ ನನಗೆ ಸಕಲ ಭೋಗಭಾಗ್ಯಗಳೂ ಉಂಟಾಗಿದ್ದರೂ, ಇವುಗಳನ್ನು ಅನುಭವಿಸುವ ಭಾಗ್ಯವು ಪೌಲಸ್ತ್ಯನ ಭಾಗವಾಗಿರುವುದರಿಂದ ನಾನು ದುರ್ದೈವಿಯಾಗಿರುವೆನೆಂದನು."

ಯಮನು:—"ಪೂರ್ವಕಾಲದಿಂದಲೂ ದಂಡವೇ ಶರಣವಾಗಿಟ್ಟುಕೊಂಡು, ಯುದ್ಧದಲ್ಲಿ ಸಕಲರನ್ನೂ ಗೆಲ್ಲುತ್ತಾ ಬಂದೆನು. ಈಗ ನನಗೆ ದಂಡವೇ (ನಮಸ್ಕಾರವೇ) ಶರಣವಾಗಿ ಯುದ್ಧದಲ್ಲಿ ನಾನು ಸತ್ತಿರುವೆನು" ಎಂದನು.

ಕುಬೇರನು:—"ದೇವಾ! ನನಗೆ ನೀನು ನವನಿಧಿಗಳನ್ನು ಅನುಗ್ರಹಿಸಿದ್ದರೂ ದಾನವನ ನವನವ ಧಾಟಿಗಳಿಂದ ಕೊಳ್ಳೆಗೆ ಸಿಲುಕಿ ಆದಿಭಿಕ್ಷು (ಈಶ್ವರ) ವಿನ ಸ್ನೇಹವು ನನಗೆ ಸಾರ್ಥಕವೆನಿಸಿದೆ" ಎಂದನು.

ಅಗ್ನಿ:—"ಸ್ವಾಮಿ! ರಾಕ್ಷಸ ಸ್ತ್ರೀಯರು ನನ್ನ ಕೊಂಬುಗಳಲ್ಲಿ ಮೂರರ ಮೇಲೆ ಮಡಕೆಯನಿಟ್ಟು ನಾಲ್ಕನೆಯ ಶೃಂಗವನ್ನು ಸವಿದೆಯಾಗಿ ಮಾಡಿ, ಅನ್ನವನ್ನಡು ಎಂದು ಅಜ್ಞಾಪಿಸಲು, ಆ ಕೊಂಬುಗಳನ್ನು ಸುಟ್ಟುಕೊಳ್ಳದೆ ನಾನು ಅಡಿಗೆ ಮಾಡಿದೆನೆಂದು ನನ್ನನ್ನು ಹಾಸ್ಯಮಾಡುತ್ತಿರುವರು. ನನಗೇಕೆ ಶೃಂಗಗಳನ್ನು ಕೊಟ್ಟೆ?" ಎಂದನು.

ವಾಯುವು:—"ನನಗೆ ಪ್ರಭಂಜನನೆಂಬ ಹೆಸರು ಕೊಟ್ಟಿದ್ದರೂ ವಿಪ್ರಭಂಜನನೆನಿಸಿರುವೆನು. ದಾನವನು ನನ್ನ ಮೇಲೆ ಬೀಳುತ್ತಾ ಬಂದುದರಿಂದ ನನ್ನ ಆಶುಗತ್ವವು ಚರಿತಾರ್ಥವೆನಿಸಿಕೊಂಡಿದೆ"ಯೆಂದನು.

ನವಗ್ರಹಗಳು:—"ಜಗದೊಡೆಯಾ! ದಿನೇ ದಿನೇ ರಾಕ್ಷಸರಿಗಾಗಿ ಲಕ್ಷಗಟ್ಟಳೆ ಮಕ್ಕಳು ಹುಟ್ಟುತ್ತಿರುವುದರಿಂದ ಅವರ ಜನ್ಮಲಗ್ನದಲ್ಲಿ ಶುಭಾಶುಭ ಫಲಗಳನ್ನು ನಿಯಮದಂತೆ ಕೊಡಲು ಗ್ರಹಚಾರವು ಸಾಲದೆ ಹೋಗಿದೆ."

ಮುನಿಗಳು:— ಅಯ್ಯೋ! ನಮ್ಮ ಜೀವಮಣಿಮಯವಾದ ಮನೆಗಳೂ, ವಿದ್ಯುತ್ಕಾಂತಿಯ ಶರೀರವರ್ಣವೂ, ನಾವು ಎಲ್ಲಿ ಹೋಗಿ ಅಡಗಿಕೊಂಡರೂ ನಮ್ಮ ಜೀವವಿರೋಧಿಗಳಾದುವು. ಅಮೃತವು ಒಂದೊಂದು ವೇಳೆ ವಿಷವಾಗುವುದು. ಎಂಬಂತೆ ಪ್ರಾಣ ಹೋಗದೆ ಮಾನವನ್ನು ದಾನವರಿಗೆ ಧಾರೆಯೆರೆಯ ಬೇಕಾಗಿ ಬಂದುದರಿಂದ ನಮಗೆ ಅಮೃತವೇನೇ ವಿಷವಾಗಿದೆ. ಮೇನಕೆಯು ಪುರುಷಾಕೃತಿಯನ್ನು ವಹಿಸಿ, ಓಡಿ ಹೋಗುತ್ತಿರಲು ಒಬ್ಬ ರಕ್ಕಸನು ರಣೇಚ್ಛೆಯಿಂದ ಮಲ್ಲಯುದ್ಧಕ್ಕೆ ಬರಸೆಳೆದನು. ಆಗಲಾ ಸತಿಯು ಗೋಳಿಡಲು, ಅದು ಮದನಕದನವಾಗಿ ಪರಿಣಮಿಸಿತು"!

ದೇವತೆಗಳು:—"ಲೋಕೇಶ್ವರಾ! ನಮಗೆ ಯಜ್ಞಗಳನ್ನು ಭುಜಿಸುವ ಹಕ್ಕು ತಪ್ಪಿಹೋಯಿತು. ಅಮೃತವನ್ನು ಕುಡಿದಿರುವುದರಿಂದ ನಮ್ಮ ಪ್ರಾಣವೂ ಹೋಗದ

Digitized by ROJA MUTHIAH RESEARCH LIBRARY

ಇದೆ. ಅಸ್ಥಿಮಾತ್ರಾ ವಶಿಷ್ಟರಾಗಿ ಜೀವಿಸಿಕೊಂಡಿರುವ ನಮ್ಮ ಶರೀರಗಳನ್ನು ದಯ ಮಾಡಿ ನೋಡು."

ಎಂದು ಪ್ರತಿಒಬ್ಬರೂ ಬಂದೊಂದು ವಿಧವಾಗಿ ರಾವಣಾಸುರನ ಬಾಧೆಗಳನ್ನು ಚಿತ್ತರಿಸಲಾ ಚಿತ್ತ ಜಪಿತನು ಅವರ ತತ್ತರವನ್ನು ಬಿಡಿಸಿ, ಹೊತ್ತು ಬರುವತನಕ ಶಾಂತ ಚಿತ್ತರಾಗಿ ಸೈಸಿಕೊಂಡಿದ್ದರೆ ನಾನು ಮುಂದೆ ಭೂಲೋಕದಲ್ಲಿ ಶ್ರೀರಾಮನಾಗಿ ಅವತರಿಸಿ, ರಾವಣಾಸುರನನ್ನು ಕೊಂದು, ನಿಮ್ಮ ಕಷ್ಟಗಳನ್ನು ಪರಿಹರಿಸುವೆನು. ಎಂದು ಅಭಯವಿತ್ತು ನೀವು ನಿಮ್ಮ ನಿಮ್ಮ ಅಂಶಗಳಿಂದ ಭೂಮಿಯಲ್ಲಿ ವಾನರರನ್ನು ಸೃಷ್ಟಿಸಿರಿ. ನರವಾನರರೇ ಅವನಿಗೆ ನಿಶಾರಣ ಕಾರಣರೆಂದು ಗೊತ್ತಾಗಿರುವುದರಿಂದ ನಿಮ್ಮ ಸಹಾಯವು ಅಗತ್ಯವಾಗಿದೆಯೆಂದು ಹೇಳಿ ಶ್ರೀಮನ್ನಾರಾಯಣನು ಅಂತರ್ಧಾನನಾದನು.

ಆಗ ದೇವತೆಗಳು ಶ್ರೀಹರಿಯ ವಾಕ್ಯಗಳನ್ನು ನಂಬಿಕೊಂಡು ತಮ್ಮ ತಮ್ಮ ನೆಲೆಗಳಿಗೆ ಹಿಂತಿರುಗಿ ಬರುತ್ತಿರುವಾಗ ಇಂದ್ರನು ಬ್ರಹ್ಮನನ್ನು ಕುರಿತು ಎಲೈ ಪಿತಾಮಹನೇ! ನಾರಾಯಣನು ಯಾವಾಗ ಹುಟ್ಟುವನು! ಯಾವಾಗ ರಾವಣನ ಹುಟ್ಟಡಗಿಸುವನು! ನಮ್ಮ ವಿಪತ್ತುಗಳು ಎಂದಿಗೆ ಮಟ್ಟಾಗುವವು. ಯಾವ ಪುಣ್ಯಾತ್ಮನಿಗೆ ಯಾವ ಹೆಂಗಸಿನ ಗರ್ಭದಲ್ಲಿ ಶ್ರೀ ರಾಮನು ಅವತರಿಸುವನು. ಇವುಗಳನ್ನು ತಿಳಿಸಿದರೆ ಎಣಿಸಿಕೊಂಡಾದರೂ ದಿನಗಳನ್ನು ನೂಕುತ್ತಿರುವೆವು ಎಂದು ಪ್ರಾರ್ಥಿಸಲಾ ಪರಮೇಷ್ಟಿಯು ಆ ಕಾಲವನ್ನು ನಿರ್ಣಯಿಸಿ ಇಂತೆಂದನು.

ಬರುವ ಫಾಲ್ಗುಣ ಶುದ್ಧದ ದಶಮಿ ಭಾರ್ಗವವಾರ ವೃಷಭಲಗ್ನದ ಶುಭ ಮುಹೂರ್ತದಲ್ಲಿ ಅಜಮಹಾರಾಜನ ಮಗನಾದ ದಶರಥನು ಕೌಸಲ್ಯೆಯನ್ನು ಮದುವೆಯಾಗುವನು. ಆ ದಶರಥ ಪುತ್ರನಾಗಿ ಶ್ರೀರಾಮನು ಅವತರಿಸಿ ದಶಕಂಠನನ್ನು ಕೊಂದುಹಾಕುವನು; ಆಗ ನಿಮ್ಮ ದುರ್ದಶೆಗಳೆಲ್ಲವೂ ಪರಿಹಾರವಾಗುವವು. ನೀವುಗಳೆಲ್ಲರೂ ಈ ಮಾತನ್ನು ಬಹಿರಂಗ ಪಡಿಸದೆ ಗೋಪ್ಯವಾಗಿ ಇಟ್ಟಿರತಕ್ಕದ್ದು ಎಂದು ಹೇಳಿ ತಾನು ಸತ್ಯಲೋಕಕ್ಕೆ ಹೊರಟು ಹೋದನು. ಇಂದ್ರಾದಿ ದೇವತೆಗಳೆಲ್ಲರೂ ತಮ್ಮ ತಮ್ಮ ನೆಲೆಗಳನ್ನು ಸೇರಿದರು.

ದೇವಮುನಿಯಾದ ನಾರದನು ಅಲ್ಲಿದ್ದನು. ಈ ಮಾತು ಅವನ ಕಿವಿಗೆ ಬಿದ್ದ ಕೂಡಲೇ ಸ್ವಲ್ಪಸ್ವಲ್ಪವಾಗಿ ಉಬ್ಬಿ, ಮೊದಲು ನವಲವಲೀದಳದಂತೆ ಆಗಿ, ಆ ಬಳಿಕ ಆಲದ ಎಲೆಯಾಗಿ, ತರುವಾಯ ಬೋರೆಯ ಹಣ್ಣಾಗಿ, ಆ ಮೇಲೆ ನಿಂಬೆಯ ಹಣ್ಣಿನಂತೆ ಆಗಿ ಅನಂತರ ಮಾದಳದ ಹಣ್ಣಾಗಿ, ಆ ಬಳಿಕ ಸೌತೇಕಾಯಾಗಿ, ಕಡೆಗೆ ಕುಂಬಳಕಾಯಾಗಿ, ಕೊನೆಯಲ್ಲಿ ಎಣ್ಣೆಯ ಬುದ್ದಲಿಯಂತೆ ಹೊಟ್ಟೆಯಲ್ಲಿ ಉಬ್ಬಿಕೊಂಡಿತು. ಆ ಮುನಿಯು ಈ ಸಂಕಟವನ್ನು ತಾಳಲಾರದೆ ಈ ಮಾತನ್ನು ಮೊದಲು



ಲಂಕಾಧಿಪತಿಯಾದ ರಾವಣನಿಗೆ ನಿಶ್ಶಂಕೆಯಿಂದ ತಿಳಿಸಿದ ಹೊರ್ತು ತನ್ನ ಬಿಂಕವು ಉಳಿಯಲಾರದೆಂದುಕೊಂಡು ತತ್‌ಕ್ಷಣದಲ್ಲಿಯೇ ಹೊರಟು ಲಂಕೆಯ ಮಾರ್ಗದಲ್ಲಿ ಹೋಗುತ್ತಿರುವಾಗ ರಾವಣನು ಇದುರಿಗೆ ಬರುತ್ತಿದ್ದನು. ಅವನನ್ನು ಕಂಡ ಕೂಡಲೇ ಈ ನಾರದ ಮಹರ್ಷಿಯು "ಏನಯ್ಯಾ! ದಾನವೇಶ್ವರ: ನಾನು ನಿನ್ನನ್ನೇ ಹುಡುಕಿಕೊಂಡು ಬರುತ್ತಲಿದ್ದೆನು. ಎದುರಿಗೆ ನೀನು ಸಿಕ್ಕಿದುದು ಬಹಳ ಉತ್ತಮವಾಯಿತು. ಹತ್ತಿರಕ್ಕೆ ಬಾ." ತಿಂದು ಕರೆದು ಕುಳ್ಳಿರಿಸಿಕೊಳ್ಳಲಾ ರಾವಣನು ಆ ಮುನೀಂದ್ರಂಗೆ ಕೈಮುಗಿದು "ಮಹಾಸ್ವಾಮಿ! ಕಲಹಾಶನರೇ! ನನ್ನ ಪರಾಕ್ರಮಕ್ಕೆ ತ್ರಿಲೋಕಗಳಲ್ಲಿ ಎಲ್ಲಿಯೂ ಕುಂದಿಲ್ಲವಷ್ಟೇ? ತ್ರಿಲೋಕಸಂಚಾರಿಗಳಾದ ನಿಮಗೆ ತಿಳಿಯದ ವಿಶೇಷಗಳು ಯಾವುವು ಇರಲಾರವು ಏನಾದರೂ ಅತಿಶಯವಿದ್ದಲ್ಲಿ ಹೇಳುವಿರಾ? ಎಂದು ಕೇಳಲಾ ನಾರದನು — ಅಯ್ಯಾ ಸುರಲೋಕದಲ್ಲಣಾ! ಇದುವರೆಗೂ ನಿನಗೆ ಮುಪ್ಪೊದಗುವ ಮಾರ್ಗವಿರಲಿಲ್ಲ. ಈ ಲೋಕದಲ್ಲಿ "ಜಾತಸ್ಯಮರಣಂ ಧ್ರುವಂ" ಎಂಬಂತೆ ಹುಟ್ಟಿದವನಿಗೆ ಸಾವು ಸಿದ್ಧವಷ್ಟೇ ಎಂದನು. ಈ ಮಾತನ್ನು ಕೇಳಿದ ಕೂಡಲೇ ಆ ರಾಕ್ಷಸೇಶ್ವರನಿಗೆ ಎದೆಯಲ್ಲಿ ಶೂಲವಿರಿದಂತೆ ಆಗಿ "ಏನಿದು ನಿಮಗೆ ಹುಚ್ಚು ಹಿಡಿಯಿತೋ? ಅಥವಾ ಸ್ವಪ್ನದ ಭ್ರಾಂತಿಯೊ? ನನಗೂ ಸಾವು ಬರುವುದೆಂದು ಹೇಳುವಿರಲ್ಲ; ಇಂದ್ರಾದ್ಯಷ್ಟದಿಕ್ಪಾಲಕರೂ ಎಲ್ಲರ ಹಣೆಗಳಲ್ಲಿಯೂ ಬರೆಯುವ ಬ್ರಹ್ಮದೇವನೂ ನನ್ನ ಊಳಿಗದವರಾಗಿ ಕೆಲಸ ಮಾಡುತ್ತಿರುವಲ್ಲಿ ನನ್ನನ್ನು ಕೊಲ್ಲುವವರಾರು? ಮೃತ್ಯುವನ್ನು ಮೃತ್ಯುವಿಗೆ ಸರಿಮಾಡಿದ ನನಗೆ ಬೇರೇ ಮತ್ಯು ಉಂಟೆ? ನೀನು ಔಚಿತ್ಯವನ್ನರಿಯದೆ ಇಂತಹ ಮಿಥ್ಯಾವಚನಗಳನಾಡಿದರೆ ಸತ್ಯವಾದಿ ಎನಿಸುವೆಯಾ? ಎನಲಾ ನಾರದನು ಅಯ್ಯಾ! ದೇವರಹಸ್ಯವೊಂದಿರುವುದು. ನಿನಗೆ ಹಿತವನ್ನು ಬಯಸಿ ಅದನ್ನು ನಿನಗೆ ತಿಳಿಸಿ ಹೋಗಬೇಕೆಂತಲೇ ನಾನು ಇಷ್ಟು ದೂರ ಬಂದಿರುವೆನು.

ಬಹಿರಂಗಪಡಿಸಕೂಡದ ವಿಷಯವಾದುದರಿಂದ ನಿರ್ಜನ ಪ್ರದೇಶದಲ್ಲಿ ಅದನ್ನು ನಿನಗೆ ತಿಳಿಸಬೇಕಾಗಿದೆ ಹೇಳುವೆನು ನಡೆ? ಯೆನಲು ರಾವಣನು ಸೊಳ್ಳೆ ಮುಂತಾದವು ಕೂಡ ಸುಳಿಯಲು ಅವಕಾಶವಿಲ್ಲದ ರಹಸ್ಯವಾದ ಒಂದು ಕೋಣೆಯೊಳಕ್ಕೆ ಆ ಮುನೀಂದ್ರನನ್ನು ಕರದೊಯ್ದನು? ಅವನನ್ನು ಹಿಂದಕ್ಕೂ ಮುಂದಕ್ಕೂ ಪಕ್ಕಗಳಿಗೂ ನೋಡುತ್ತಾ ನೋಡುತ್ತಾ ಸನ್ನು ಮಾಡದೆ ಮೆಲ್ಲಮೆಲ್ಲಗೆ ಹೋಗಿ ಯಾರೂ ಇಲ್ಲದ ಪ್ರದೇಶದಲ್ಲಿ ರಾವಣನನ್ನು ಕುಳ್ಳಿರಿಸಿಕೊಂಡು ಅವನ ಕಿವಿಯಲ್ಲಿ ಇಂತೆಂದು ಹೇಳಿದನು.

ಅಯ್ಯಾ! ಈ ವಾಕ್ಯವು ಅತಿ ಗೋಪ್ಯವಾದುದು. ಆದುದರಿಂದ ಯಾರಸಂಗಡಲೂ ಹೇಳಬೇಡ. ಹರಿಯಂತೆ! ಧರೆಯಲ್ಲಿ ದಶರಥರಾಯನ ಮಗನಾಗಿ ಹುಟ್ಟುವವ

Digitized by ROJA MUTHIAH RESEARCH LIBRARY

ನಂತೆ! ಪರಿವಾರಸಹಿತವಾಗಿ ನಿನ್ನನ್ನು ಕೊಲ್ಲುವನಂತೆ? ಈ ಮಾತು ನಿಜವೆಂದು ನಂಬು ಎಂದು ಕಿವಿಯಲ್ಲಿ ಹೇಳಿ ಹೊರಡಲು ಉಜ್ಜುಗಿಸಲಾ ರಾವಣನು ಸ್ವಾಮೀ ನಾರದರೆ! ಏತಕ್ಕೆ ಅವಸರಪಡುವಿರಿ? ಯಾವಾಗ, ಯಾರಲ್ಲಿ ಯಾರಿಗೆ ಯಾವಕಾರಣದಿಂದ ಹರಿಯು ಹುಟ್ಟುವನೆಂಬುವದನ್ನು ದಯಮಾಡಿ ಹೇಳಿರಿ? ಎಂದು ಪ್ರಾರ್ಥಿಸಲು ಮುನಿಯು ಕರುಣಾರ್ದ್ರಚಿತ್ತನಾಗಿ "ಮಗನೇ ಕೇಳು" ನಿನ್ನ ಕಾಟವನ್ನು ತಾಳಲಾರದೆ ದೇವರ್ಕಗಳೆಲ್ಲರೂ ಬ್ರಹ್ಮನೊಡಗೊಂಡು ವೈಕುಂಠಕ್ಕೆ ಹೋಗಿ ನಾರಾಯಣನಲ್ಲಿ ಹೇಳಿಕೊಂಡರು. ಆ ವಿಷ್ಣುವು ಅವರ ಮೊರೆಯನ್ನು ಲಾಲಿಸಿ, ನಾನು ಅಯೋಧ್ಯಾಧಿಪತಿಯಾದ ದಶರಥರಾಜನ ಮಗನಾಗಿ ಭೂಮಿಯಲ್ಲಿ ಹುಟ್ಟಿ ರಾವಣನನ್ನು ಕೊಲ್ಲುವೆನು ಎಂದು ಅಭಯವನ್ನು ಇತ್ತಿರುವೆನು. ಆ ದಶರಥನು ಫಾಲ್ಗುಣ ಶುದ್ಧ ದಶಮೀ ವೃಷಭಲಗ್ನದಲ್ಲಿ ದಕ್ಷಿಣಕೋಸಲದೇಶದ ಅರಸನಾದ ಭಾನುಮಂತನ ಮಗಳೆನಿಸಿದ ಕೌಸಲ್ಯೆಯನ್ನು ಮದುವೆಯಾಗುವನಂತೆ! ಅವಂಗೆ ರಾಮನೆಂಬ ಹೆಸರಿನಿಂದ ಶ್ರೀವಿಷ್ಣುವು ಅವತರಿಸಿ ನಿನ್ನನ್ನು ಕೊಲ್ಲುವನಂತೆ! ಈ ಮಾತನ್ನು ಇಂದ್ರಾದಿ ದೇವತೆಗಳಿಗೆ ಬ್ರಹ್ಮದೇವನು ನಾನು ಕೇಳುವ ಹಾಗೆ ಹೇಳಿದನು. ಬ್ರಹ್ಮಲಿಪಿಯು ತಪ್ಪಿಸಲರಿಯದಷ್ಟೆ? ಬ್ರಹ್ಮನ ತಂದೆಯ ಅಭಯ ಪ್ರದಾನವು ಅಮೋಘವಾದುದು. ಆದುದರಿಂದ ನೀನು ಇಂದ್ರನೊಂದಿಗೆ ಸ್ನೇಹದಿಂದ ಇದ್ದುಕೊಂಡು ಕೆಲವು ಕಾಲ ಬಾಳು. ಎಂದು ಹೇಳಲಾ ರಾವಣನು ಘಕಘಕನೆ ನಕ್ಕು ಸ್ವಾಮಿ! ನಿಮಗೆ ಹುಚ್ಚು ಹಿಡಿಯಿತೆ? ಹರಿಯು ನರರೂಪದಿಂದ ನನ್ನನ್ನು ಕೊಲ್ಲುವೆನೆಂದು ಸಂಕಲ್ಪಿಸಿರುವನೆ! ಹಾಗಿದ್ದರೆ ಇದುವರೆಗೆ ಈ ಕೆಲಸವನ್ನು ಏತಕ್ಕೆ ಮಾಡದೆ ಹೋದನು? ಅಜಿಯ ಮಗನು ಅಜಿಯಲ್ಲಿ ನನ್ನನ್ನು ಗೆಲ್ಲುವನೆಂಬ ಸೋಜಿಗದ ಮಾತಿಗೆ ಈ ಜನವೆಲ್ಲಾ ನಗುವುದಲ್ಲದೆ ನಾನೂ ನಾಚುವೆನು. ಅಜನನ್ನು ಗೆದ್ದವನನ್ನು ಗೆದ್ದ ನನಗೆ ಅವನಿದಿರೆ? ಈ ಪುಕ್ಕ ಬೆದರಿಕೆಗೆ ನಾನಂಜುವೆನೆ? ಆಗಲಿ, ನಿಮ್ಮ ಮಾತನ್ನೇಕೆ ಹೀಯಾಳಿಸಬೇಕು. ಅದರಲ್ಲಿಯೂ ಸ್ವಲ್ಪ ವಿಶ್ವಾಸವನಿಡೋಣ. ಅವರಿಬ್ಬರಿಗೆ ಮದುವೆಯಾಗಿ ಗಂಡಹೆಂಡರಾದ ಮೇಲಲ್ಲವೆ? ಪುಂಡರೀಕಾಕ್ಷನು ಈ ಭೂಮಂಡಲದಲ್ಲಿ ಹುಟ್ಟುವನೆಂಬುದು; ಅವರ ವಿವಾಹನವನ್ನೇ ಆಗಗೊಡಿಸದಿದ್ದರೆ ಬೊಮ್ಮನೇನು ಮಾಡುವನು! ಅವರಪ್ಪನು ಹುಟ್ಟುವುದು ತಾನೇ ಎಲ್ಲಿ? ಈ ಗುಟ್ಟನ್ನು ರಟ್ಟುಮಾಡದೆ ಪುಟ್ಟಕಿಟ್ಟನು ಹುಟ್ಟದಂತೆ ಮಾಡಿ, ದಿಟ್ಟಪನದಿಂದ ದೇವತೆಗಳ ಹುಟ್ಟಡಗಿಸೀ ಮಟ್ಟವಿಕ್ಕುವೆನು. ತಮ್ಮ ದಿಟ್ಟಯೊಂದು ನನ್ನ ಕಡೆಗಿಟ್ಟರೆ ಇಂತಹ ಜಟ್ಟಿಗಳು ಎಷ್ಟು ಮಂದಿ ಬಂದರೂ ಹೆದರತಕ್ಕವನಲ್ಲವೆಂದು ಹೇಳಿ ಅವರನ್ನು ಸತ್ಕರಿಸಿ ಕಳುಹಿ ತನ್ನ ಅಂತ:ಪುರಕ್ಕೆ ಹೋಗಿಸೇರಿದನು.

---

೭೯೩



O.33.2 IYAK N12

## ೭ ನೆಯ ಪ್ರಕರಣ.

7603

ತರುವಾಯ ರಾವಣಾಸುರನ ಮನಸ್ಸನ್ನು ಚಿಂತೆಯಾವರಿಸಲು, ಶಾಂತಿಯಳಿದಾ ದೇವಾಂತಕನು ಚಿಂತಾಕ್ರಾಂತನಾಗಿ ಕರ್ತವ್ಯತಾಮೂಢನಾಗಿ ದಿಕ್ಕುತೋರದೆ ಹಾಸಿಗೆಯಲ್ಲಿ ಬಿದ್ದು ಹೊರಳಾಡುತ್ತಿದ್ದನು. ಆಗ ಪ್ರಿಯಪತ್ನಿಯಾದ ಮಂಡೋದರಿಯು ಆತನ ಸಮೀಪಕ್ಕೆ ಬಂದು ದುಗುಡವಾಂತಕಾಂತನನ್ನು ಸಂತೈಸಲಿಂತೆಂದಳು.-ಎಲೈ ಪ್ರಾಣಕಾಂತನೆ! ಕೃತಾಂತಾದಿಗಳಿಗೂ ಹೆದರದೆ ಆ ಹಿಮಕರನಂತೆ ಧೀರನಾದ ನೀನು ಈಗ ಚಿಂತಾಂಗನೆಗೆ ವಶನಾಗಿರುವದಕ್ಕೆ ಕಾರಣವೇನೋ ತಿಳಿಯಲಿಲ್ಲ? ನನ್ನಲ್ಲಿ ಅಂತರ್ಯವನ್ನು ಹೇಳಬಹುದಾಗಿದ್ದರೆ ವಾಸ್ತವವನ್ನು ಮರೆಮಾಚದೆ ಈ ದಾಸಿಯಲ್ಲಿ ಸಹಜವಾದ ಪ್ರೇಮವನ್ನು ಇಟ್ಟು ಅನುಗ್ರಹಿಸಬೇಕೆಂದು ವಿನಯದಿಂದ ಬೇಡಿಕೊಳ್ಳಲಾ ದಶಕಂಠನು ಎಲೈ ಪ್ರಾಣನಾಯಕಿ! ದೇವಮುನಿಯಾದ ನಾರದನು ದೇವರಹಸ್ಯವೆಂದು ನನ್ನ ಮನಸ್ಸಿನಲ್ಲಿ ಭಯದ ಬೀಜವೊಂದನ್ನು ನೆಟ್ಟು ಹೋದನು. ಅದೇನಂದರೆ, ದೇವತೆಗಳ ಮೊರೆಯನ್ನು ಕೇಳಿ ವಿಷ್ಣುವು ಕೌಸಲ್ಯೆಯ ಹೊಟ್ಟೆಯಲ್ಲಿ ರಾಮನೆಂಬ ಹೆಸರಿನಿಂದ ಪುಟ್ಟನಾಗಿ ಹುಟ್ಟಿ, ನನ್ನನ್ನು ಕೊಲ್ಲುವೆನೆಂದು ಅಭಯವನ್ನಿತ್ತಿರುವನಂತೆ! ಅವರ ವಿವಾಹವೇ ಸಾಗದ ಹಾಗೆ ವಿಘ್ನವನ್ನಾಚರಿಸಲು ಯೋಚಿಸುತ್ತಲಿರುವೆನು, ಎಂದನು. ಮಂಡೋದರಿಯು ಆ ಮಾತನ್ನು ಕೇಳಿ ಬಹಳವಾಗಿ ನಕ್ಕು, ಎಲೈ ತ್ರೈಲೋಕ್ಯದಲ್ಲಣನೇ! ದೈವವಿಲಾಸವನ್ನು ಪೌರುಷವು ಅಡ್ಡೈಸುವುದೆ? "ಅಹುದಹುದಾಗದುದಾಗದು ಬಹು ದು:ಖಂಗೊಳ್ಳಲೇಕೆ ಬಪ್ಪುದು ತಪ್ಪದು" ಎಂಬ ನೀತಿಯನ್ನು ನೀನರಿಯೆಯೊ? ನೂರು ಸುಳ್ಳುಗಳನ್ನಾದರೂ ನುಡಿದು ವಿವಾಹವನ್ನು ಸಂಘಟಿಸಬೇಕೆಂದು ಹಿರಿಯರು ಹೇಳಿರುವುದನ್ನು ಮರೆತು ಹೀಗೆ ವಿವಾಹವಿಘಟನೆಯನ್ನು ಮಾಡಲು ಮನಸ್ಕರಿಸಲಾದೀತೆ? ಛೀ ಛೀ! ಇಂತಹ ಅಕಾರ್ಯಕ್ಕೆ ಕೈಯೊಡ್ಡದಿರು. ದೈವವು ಯತ್ನಿಸಿದ ಕಾರ್ಯವನ್ನು ನೀನು ಕೆಡಿಸಲಾಪೆಯಾ? ಬ್ರಹ್ಮಸಂಘಟನೆಯನ್ನು ತಪ್ಪಿಸಲಿಕ್ಕೆ ಯಾರಿಗೂ ಶಕ್ತಿಸಾಲದು. ವಿಫಲಪ್ರಯತ್ನನಾಗಿ ಕೀರ್ತಿಕಾಂತೆಯನ್ನು ಕಳೆದುಕೊಂಡು ಮಂದಮತಿಯಾಗಿ ಪಶ್ಚಾತ್ತಾಪಗೊಳ್ಳಬೇಕಾಗುವದು, ಈ ಯೋಚನೆಯನ್ನು ಎಂದಿಗೂ ಮಾಡಬೇಡ. ಎಂದು ನುಡಿಯಲಾ ದಶಕಂಧರನು ಪಟ್ಟದರಸಿಯನ್ನು ಕುರಿತು,—ಎಲೈ ನಾರಿಯೇ! ಭೀರುವಾಗಿ ಶೂರಾಗ್ರಣಿಯೊಡನೆ ಇಂತಹ ನುಡಿಗಳನ್ನಾಡಬಹುದೆ? ಪೌರುಷವೇ ದೈವವಲ್ಲದೆ ಬೇರೆ ದೈವವೆತ್ತಣದು? ದೂರಾಲೋಚನೆಯಿಂದ ಯತ್ನಿಸಿದ ಕಾರ್ಯವು ಪೂರೈಸದೆ ಇರದು. ಶಂಕಾರಹಿತಳಾಗಿ ಧೀರತೆಯಿಂದ ಇರು. ನನ್ನ ಸಾರಪರಾಕ್ರಮವನ್ನು ನೀನರಿತಿದ್ದರೂ ಕಾರ್ಯಕ್ಕೆ ಮುಂದರಿದಿರುವ ನನ್ನನ್ನು



Digitized by ROJA MUTHIAH RESEARCH LIBRARY

ಹೆದರಿಸಬಹುದೆ? ಸ್ವಲ್ಪವೂ ಮನಸಿನಲ್ಲಿ ಯೋಚಿಸಬೇಡ. ಎಂದು ಹೇಳಿ ಮಾಯಾರೂಪವನ್ನು ಧರಿಸಿ ದಕ್ಷಿಣಕೋಶಲ ಪುರಿಗೆ ಹೋಗಿ, ರಾತ್ರಿಯಲ್ಲಿ ನಿದ್ರಾಪರವಶಳಾಗಿ ಮೆಯ್ಮರೆದು ಮಲಗಿರುವ ಕೌಸಲ್ಯೆಯನ್ನು ಮಂಚದೊಂದಿಗೆ ಹೊತ್ತುಕೊಂಡು ಕಾಮಚಾರಿಯಾಗಿ ಸಮುದ್ರತೀರಕ್ಕೆ ಬಂದು, ಸಾಗರನನ್ನು ಕರೆದು, ಈ ಪೆಟ್ಟಿಗೆಯನ್ನು ಜತನದಿಂದ ನಿನ್ನಲ್ಲಿ ಬೈಚಿರಿಸು. ಮಾನವ, ದಾನವ, ಕಿನ್ನರ, ಕಿಂಪುರುಷಾದಿಗಳಲ್ಲಿ ಯಾರಿಗೂ ಗೋಚರವಾಗದಂತೆ ರಹಸ್ಯದಲ್ಲಿಟ್ಟಿರಬೇಕು. ಬಹಿರಂಗಪಡಿಸಿದರೆ ತಕ್ಷಣವೇ ನಿನ್ನ ತಲೆಯನ್ನು ಕಡಿದು ಹಾಕುವೆನು. ಎಂದು ಆಜ್ಞಾಪಿಸಿ ಒಪ್ಪಿಸಿ ನಿರ್ಭಯದಿಂದ ತನ್ನ ಪಟ್ಟಣಕ್ಕೆ ಹೋಗಿ ಸೇರಿದನು.

ಇತ್ತಲಾ ಮಂದಾಸನದ ಪೆಟ್ಟಿಗೆಯಲ್ಲಿದ್ದ ಕೌಸಲ್ಯೆಯು ನಿದ್ದೆ ತಿಳಿದೆದ್ದು ನೋಡಿ ಇದೇನು? ಸುತ್ತಲೂ ಕತ್ತಲೆ ಕವಿದಿರುವುದು! ಸೆಜ್ಜೆ ಮನೆಯಲ್ಲಿ ಮಲಗಿದ್ದ ನಾನು ಈ ಪೆಟ್ಟಿಗೆಯೊಳಗೆ ಹೇಗೆ ಸಿಕ್ಕಿಕೊಂಡೆನು. ನನ್ನ ಕೆಳದಿಯರು ಏನಾದರು? ಪರಿಚಾರಿಯರೆಲ್ಲಿ? ನಿಶ್ಶಬ್ದವಾಗಿದೆಯಲ್ಲ! ಇದೇನು ಸ್ವಪ್ನವೊ? ಭ್ರಾಂತಿಯೋ? ಅಯ್ಯೋ! ಅಮ್ಮಾ! ನನ್ನನ್ನು ಹೊತ್ತು ಹೆತ್ತು ಸಾಕಿಸಲಹಿದ ನೀನು ನಿರ್ದಯೆಯಿಂದ ನನ್ನನ್ನಿಲ್ಲಿಗೆ ದುಷ್ಟರು ಈ ಕತ್ತಲೆ ಕೋಣೆಗೆ ಎತ್ತಿಕೊಂಡು ಬರುವಾಗ ಎಲ್ಲಿದ್ದೆ? ಎಂದು ಹಲವು ಬಗೆಯಲ್ಲಿ ಪ್ರಲಾಪಿಸುತ್ತಾ ಅತ್ತು ಅತ್ತು ಸಾಕಾಗಿ ಕೊನೆಗೆ ಚಿತ್ತಜನನ್ನ ಪೆತ್ತ ಆದಿಲಕ್ಷ್ಮಿಯನ್ನು ಸ್ತೋತ್ರ ಮಾಡಿದಳೆಂತೆನೆ—

### ಲಕ್ಷ್ಮೀಸ್ತುತಿ ( ಪಂಚರತ್ನಂ ).

೧ ಕ್ಷೀರಾಬ್ಧಿ ಜಾತೆ, ಭಾರ್ಗವಿ ।
ನಾರಾಯಣಿ, ದೇವವಂದ್ಯೆ ಮಂಗಳಕಾಯೇ ॥
ಆರಾಧಿಪೆ ನೀಂ ಸೆರೆಯಿಂ ।
ದೂರೀ ಕರಿಸುತ್ತೆ ಸಲಹು ವರಮಾಲಕುಮಿ ॥

೨ ಕಮಲಾಸನನ ಜನನಿಯೆನೀಂ ।
ಕಮಲಾಲಯೆ ಕಮಲನಯನನರಸಿಯೆ ಪದ್ಮೆ ॥
ವಿಮಲಗುಣ ಮಹಿತೆ ಸಲಹೌ ।
ನಮಿಸುವೆನಾನೀಗ ನಿನಗೆ ವರಮಾಲಕುಮಿ ॥

೩ ಅಂಬೆ, ಜಗದಂಬೆ,ಶ್ರೀಯಿಂದಿರೆ ।
ಬಿಂಬಾಧರೆ, ಕಂಬುಕಂಧಿ, ಶಂಬರಜಾತೆ ॥
ನಂಬಿದರ ಪೊರೆವ ದೊರೆ ಪೀ ।
ತಾಂಬರನರ್ಧಾಂಗಿ ಕಾವುದೆಲೆ ಮಾಲಕುಮಿ ॥

Digitized by ROJA MUTHIAH RESEARCH LIBRARY



೪ ಅರಮನೆಯಿಂ ತಪ್ಪಿಸಿ ಈ ।
ಸೆರೆಮನೆಯೊಳ್ತಂದು ಕೆಡಪಿದವರಾರೋನಾಂ ॥
ಕುರುಡಿಯೆನಿಸಿರ್ಪೆನೆನ್ನಂ ।
ಕರುಣಿಸಿ ಸಲಹೆಮ್ಮ ಬೊಮ್ಮನಮ್ಮಾ ಲಕುಮಿ ॥

೫ ಕರುಣಾವರುಣಾಲಯೆ ನೀಂ ।
ಪರದೇಶಿಯನೆನ್ನ ಪೊರೆಯಲನ್ಯರ ಕಾಣೆಂ ॥
ತರಳರೆಗೊಂಡಿದೆ ಮನಮೆಲೆ ।
ಸರಸೀರುಹಪಾಣಿ ಸಲಹು ವರಮಾಲಕುಮಿ ॥

ಎಂದಾ ಜಗನ್ಮಾತೆಯನನನ್ಯಭಾವದಿಂ ಸನ್ನುತಿಸಲಾ ಮಹಾಲಕ್ಷ್ಮಿಯು ಪ್ರಸನ್ನಳಾಗಿ ಇದಿರಿನಲ್ಲಿ ನಿಂತು “ ಎಲೇ ಮಗಳೇ! ಹೆದರಬೇಡ, ದುರುಳರ ಕಪಟೋಪಾಯದಿಂದೀ ಸೆರೆಯೊಳ್ಸಿಲುಕಿಬಿದ್ದಿರುವೆ. ನಿನ್ನನೀ ಬಂದಿಯಲ್ಲಿರುವ ತನಕ ಹಸಿವು ಬಾಯಾರಿಕೆಗಳಾವುವೂ ತೋರದಂತೆಯೂ, ಯಾವ ಅಪಾಯವೂ ಬಾರದಂತೆಯೂ ವರವನ್ನಿತ್ತಿರುವೆನು. ಮುಂದೆ ತ್ವರ್‍ಯದಲ್ಲಿಯೇ ನಿನ್ನ ಬಯಕೆಗಳೊಂದುಗೂಡುವವು. ಸಂದೇಹವಿಲ್ಲವೆಂದು ನಂಬು ” ಎಂದು ಕರುಣಿಸಿ ಅಂತರ್ಧಾನವಾದಳು. ಕೌಸಲ್ಯೆಯು ಆ ಪೆಟ್ಟಿಗೆಯಲ್ಲಿ ನಿರ್ಭೀತಿಯಿಂದ ಹಸಿವು ಬಾಯಾರಿಕೆಗಳಿಲ್ಲದೆ ಮಹಾಲಕ್ಷ್ಮಿಯನ್ನು ನೆನೆಯುತ್ತಾ ಕಾಲವನ್ನು ನೂಕುತ್ತಿದ್ದಳು.

ಇತ್ತ ದಶರಥರಾಯನು ವಿವಾಹ ಪ್ರಯತ್ನಗಳನ್ನು ಸಂಭ್ರಮದಿಂದ ಮಾಡಿಕೊಂಡು ತನ್ನ ದೇಶದ ಜನರಿಗೆಲ್ಲ ಪ್ರಸಿದ್ಧ ಪಡಿಸಿದನು. ಪುರನಿವಾಸಿಗಳೆಲ್ಲರೂ ಬಹು ಸಂತೋಷದಿಂದ ತಮ್ಮ ತಮ್ಮ ಮನೆಬಾಗಿಲುಗಳನ್ನು ಅಲಂಕರಿಸಿ ತಮ್ಮ ಮಹಾರಾಜನು ಎಂದಿಗೆ ಗೃಹಮೇಧಿಯಾಗುವನು, ಪಟ್ಟದರಾಣಿಯನ್ನು ನೋಡುವ ಭಾಗ್ಯವು ತಮಗೆ ಎಂದಿಗೆ ಲಭಿಸುವುದು? ಎಂದು ಆತುರಗೊಳ್ಳುತ್ತಿದ್ದರು. ರಾಜನು ಮದುವಣಿಗನಾಗಿ ದಕ್ಷಿಣಕೋಸಲಕ್ಕೆ ಹೊರಡಲು ಅಗತ್ಯವಾದ ಸನ್ನಾಹಗಳನ್ನು ಸರಯೂ ನದೀತೀರದಲ್ಲಿ ಬೀರುಬಿಟ್ಟು, ಸಜ್ಜುಗೊಳಿಸಿಕೊಂಡು, ಪರಿವಾರ ಸಹಿತವಾಗಿ ಹೊರಟು, ದೋಣಿಗಳನ್ನು ತರುವಂತೆ ಆಜ್ಞಾಪಿಸಿದನು. ಸಂಗಡ ಬಂದಿದ್ದ ಜನರಲ್ಲಿ ಕೆಲವರು ಈಜಿಕೊಂಡು ಹೋಗಿ ತಡಿಯನ್ನು ಸೇರಿದರು. ಕೆಲವರು ತೆಪ್ಪಗಳನ್ನು ನಡಿಸಿಕೊಂಡು ಹೋಗಿ ದಡವನ್ನು ತಲಿಪಿದರು. ಕೆಲವರು ಹರಿಗೋಲುಗಳಲ್ಲಿ ನದಿಯನ್ನು ಹಾಯ್ದರು. ಕೆಲವರು ತಮ್ಮ ಬೆನ್ನುಗಳಲ್ಲಿ ಸೋರೆಯ ಬುರುಡೆಗಳನ್ನು ಕಟ್ಟಿಕೊಂಡು, ಹೊಳೆಯನ್ನು ದಾಟಿದರು. ಕೆಲವರು ಬೇರೆ ವಿಧವಾಗಿ ಮುಂದಿನ ದಡವನ್ನು ಸೇರಿದರು. ಈ ರೀತಿಯಲ್ಲಿ ಅವರವರು ತಮತಮಗೆ ಅನುಕೂಲವಾದ ರೀತಿಗಳಲ್ಲಿ ಬೇರೆ ಬೇರೆ ತೀರ್ಥಗಳಲ್ಲಿ ಸರಯು

ವನ್ನು ದಾಟಿ ಮುಂದಕ್ಕೆ ಹೋದರು. ದಶರಥರಾಯನು ಅವರು ದಾಟಿದ ರೀತಿಗಳನ್ನು ಬಹು ಸಂತೋಷದಿಂದ ನೋಡುತ್ತಾ ತನಗೋಸ್ಕರ ಸಿದ್ಧವಾಗಿ ತಂದ ಒಂದು ದೋಣಿಯಲ್ಲಿ ಕುಳಿತನು. ಅಷ್ಟರಲ್ಲಿ ಆಕಾಶದಲ್ಲಿ ಸ್ವಲ್ಪ ಕಾವಳ ಕವಿದಿತು, ಅದು ಮೊದಲು ಬಹು ಸ್ವಲ್ಪವಾಗಿದ್ದು ಬರುತ್ತ ಬರುತ್ತಾ ಎಲ್ಲಾ ಕಡೆಗಳಲ್ಲಿಯೂ ವ್ಯಾಪಿಸಿ ತೋರಿತು ಸಣ್ಣ ಸಣ್ಣ ಮಳೆ ಹನಿಗಳು ಸುರಿಯ ತೊಡಗಿದವು, ಆ ಮೇಲೆ ತೋರ ಮಳೆವನಿಗಳುದುರಿದವು. ತರುವಾಯ ಬಿರುಗಾಳಿ ಬೀಸಿತು. ಆ ಜಂಝೂಮಾರುತವೂ ಅತಿವೃಷ್ಟಿಯೂ ಸೇರಿ ಮಾರ್ಗಗಳನ್ನು ಜಲಮಯವನ್ನಾಗಿ ಮಾಡಿ ಮನೆಮನೆಗಳನ್ನೂ ದೊಡ್ಡ ಮರಗಳನ್ನೂ ಉರುಳಿಸಿ ಎತ್ತ ನೋಡಿದರೂ ಹಳ್ಳಗಳೂ, ತೊರೆಗಳೂ, ಚೆಲುವೆಗಳೂ, ಕೆರೆಗಳೂ ಏಕವಾಗಿ ಜಲಪ್ರಳಯದಂತೆ ತೋರುತ್ತಿದ್ದಿತು. ಮಾರ್ಗಸ್ಥರು ದಿಕ್ಕುತಿಳಿಯದೆ ತಲ್ಲಣಿಸಿ ನೀರಿನಲ್ಲಿ ಬಿದ್ದು ಹೊಡೆದುಕೊಂಡು ಹೋಗುತ್ತಲಿದ್ದರು. ದೋಣಿಯಲ್ಲಿ ಕುಳಿತಿದ್ದ ದಶರಥನು ಕೂಡ ಆ ಕಗ್ಗತ್ತಲೆಯಲ್ಲಿ ಮಾರ್ಗವನ್ನು ಕಾಣದೆ ಕಳವಳಪಡುತ್ತ ಚಿಂತೆಯಲ್ಲಿ ತನ್ನ ದೋಣಿಯೊಂದಿಗೆ ನೀರಿನಲ್ಲಿ ಮುಳುಗಿಕೊಂಡನು. ಆತನು ಮುಳುಗಿ ಎದ್ದು ಮರಳಿ ಮುಳುಗಿ ಹಿಡಿದುಕೊಳ್ಳಲಿಕ್ಕೆ ಯಾವ ಆಧಾರವನ್ನು ಕಾಣದೆ ನದೀಪ್ರವಾಹದಲ್ಲಿ ಹೊಡೆದುಕೊಂಡು ಹೋಗಿ ಸಾಗರದಲ್ಲಿ ಬಿದ್ದನು. ಅಲ್ಲಿಂದ ಆಚೆಗೆ ತಡಿಸೇರುವ ಉಪಾಯವೇ ತೋರದೆ ಹಸಿವಿನಿಂದಲೂ, ಬಳಲಿಕೆಯಿಂದಲೂ, ಕಂಗೆಟ್ಟು ಜೀವಿತಾಶೆಯನ್ನು ತೊರೆದು, ಸ್ವಲ್ಪ ಹೊತ್ತು ಸುಮ್ಮನೆ ಇದ್ದು ತರುವಾಯ ಗುರೂಪದಿಷ್ಟವಾದ ಜ್ಞಾನವು ಮನಸ್ಸಿಗೆ ತೋರಲು ಸಕಲಲೋಕೇಶ್ವರನಾದ ಭಗವಂತನನ್ನು ಅನನ್ಯಭಾವದಿಂದ ಸ್ತೋತ್ರ ಮಾಡುತ್ತಲಿದ್ದನು, ಎಂತೆಂದರೆ.

೧ ತಾರಕ ನಾಮನೆ! ಭವಸಂ ।
ತಾರಕ, ನೀಂ ಭಕ್ತವರದ ರಕ್ಷಿಪುದೆನ್ನಂ ॥
ನೀರಧಿಯ ದಾಂಟಿ ಪೋಗಲ್ ।
ತೋರದು ತನಗೀಗಲೇವೆನೆನಗಾರ್ಶರಣಂ ॥

೨ ಕರಿವರದ, ಕಮಲಲೋಚನ ।
ಸರಸಜಭವವಂದ್ಯ ಸಕಲಲೋಕಾಧೀಶಾ! ॥
ಶರಣಾಗತ ಪರಿಪಾಲಕ ।
ಕರುಣದಿನುದ್ಧರಿಸು ತನ್ನನೆಲೆ ಶ್ರೀಧರನೇ ॥

೩ ಮುನಿಮಾನಸಾಬ್ಜಹಂಸನೆ ।
ಘನಕರುಣಾಶರಧಿ ದೀನರಕ್ಷಣಧುರ್ಯಾ! ॥

Digitized by ROJA MUTHIAH RESEARCH LIBRARY



ತನಗಾರುಮಿಲ್ಲ ರಕ್ಷಕ ।
ರನಘಾತ್ಮಾ ಮತಿಯನಿತ್ತು ಸಲಹೈ ದೇವಾ ॥

೪ ಎಲ್ಲಿಯ ಸರಯುಪ್ರೂತಾನೀ ।
ಗೆಲ್ಲಿರ್ಪೆನೊ ಪಾತವೃಷ್ಟಿ ಬಂದುದದೇಕೋ? ॥
ಇಲ್ಲಿಗೆ ಬಂದುದದೆಂತೋ ।
ಬಲ್ಲವರಾರ್ನಿನ್ನನುಳಿದು ಫುಲ್ಲಾಬ್ಜಾಕ್ಷಾ ॥

೫ ಸೂತ್ರಧರ ನೀನೆ ಲೀಲಾ ।
ಮಾತ್ರದಿ ನೀ ಜಗವ ಸೃಜಿಸಿ ಪೊರೆಯುತ್ತಿರ್ಪಯ್ ॥
ಗೋತ್ರಧರ ಲಯಿಪೆ ಸಕಲವ ।
ಸುತ್ರಾ ಮಾದ್ಯಮರ ವಿನುತ ಪೊರೆವುದು ತನ್ನಂ ॥

ಹೀಗೆ ಜಗನ್ನಾಥನನ್ನು ನುತಿಸುತ್ತಾ ಹೋಗುತ್ತಿರುವಲ್ಲಿ ಸ್ವಲ್ಪ ಹೊತ್ತಿಗೆ ಬೆಳಗಾಗುತ್ತ ಬಂತು. ಕತ್ತಲೆಯು ಮೊತ್ತವನ್ನು ಮೆಟ್ಟಿ ತುಳಿದು ಸೂರ್ಯನುದಿಸಿದನು.

ಬಿಸಿಲೇರುತ್ತಾ ಬಂದಿತು. ಹತ್ತರದಲ್ಲಿ ಒಂದು ದ್ವೀಪವು ಕಾಣಿಸಿತು. ಆತನು ಅಲ್ಲಿಗೆ ಹೋಗಬೇಕೆಂದೆಣಿಸಿ ಈಜಿಕೊಂಡು ಹೋಗಿ ತಡಿಯನ್ನು ಸೇರಿದನು. ಏಕವಸ್ತ್ರಧರನಾಗಿಯೂ ಅಸಹಾಯನಾಗಿಯೂ ಇದ್ದ ಆ ದಶರಥರಾಜನು ಸಾಗರದ ಉಪ್ಪುನೀರಿನಿಂದ ತನ್ನ ಮೈಯೆಲ್ಲವೂ ಬೆತ್ತಿರಲು ಹತ್ತರವಿದ್ದ ಒಂದು ಸರೋವರಕ್ಕೆ ಹೋಗಿ ಅಲ್ಲಿನ ತಿಳಿನೀರಿನಲ್ಲಿ ಸ್ನಾನವನ್ನು ಮಾಡಿ ಅಲ್ಲಿ ಸಿಕ್ಕಿದ ಕಾಯಿ ಕಸರುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಂಡು ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸುತ್ತಿದ್ದನು.

ಅಯ್ಯೋ? ಏನಿದು? ನನ್ನ ಪಾಡು ಹೀಗಾಯಿತೆ? ಮದವಣಿಗನಾಗಿ ಔತಣದ ಊಟವನುಣ್ಣಬೇಕಾದವನಾಗಿದ್ದ ನಾನು ಈ ಕಾಯಿ ಸೊಪ್ಪುಗಳನ್ನು ತಿಂದು, ಹೊಟ್ಟೆ ಹೊರೆದುಕೊಳ್ಳುವ ಗತಿ ಬಂತು? ನನ್ನ ಪಟ್ಟಣವೆಲ್ಲಿ? ನಾನೆಲ್ಲಿ? ನನ್ನ ಪರಿಜನರೆಲ್ಲಿ? ದೈವವು ದುರ್ಬಲವಾದರೆ ಪುರುಷ ಪ್ರಯತ್ನಗಳು ಎಷ್ಟಿದ್ದರೂ ಕಾರ್ಯಕಾರಿಗಳಾಗಲಾರವು ಎಂಬುದಕ್ಕೆ ಇದಕ್ಕಿಂತಲೂ ಹೆಚ್ಚಿನ ದೃಷ್ಟಾಂತವೇಕೆ? ಹಾ ದೈವವೇ! ನನ್ನ ವಿಷಯದಲ್ಲಿ ನಿನಗೆ ಲೇಶವಾದರೂ ಕರುಣೆತೋರದೆ ಹೋಯಿತೆ? ಎಂದು ತನ್ನಲ್ಲಿ ತಾನೇ ಹಲುಬಿಕೊಳ್ಳುತ್ತಾ ಬಂದು ಬಂಡೆಯ ಮೇಲೆ ಕುಳಿತುಕೊಂಡನು.

ಅಷ್ಟರಲ್ಲಿ ಒಂದು ದೊಡ್ಡ ತಿಮಿಂಗಲವು ಮಂದಾಸನದ ಪೆಟ್ಟಿಗೆಯನ್ನು ನುಂಗಿದ್ದ ತಿಮಿಂಗಲದೊಂದಿಗೆ ಘೋರವಾಗಿ ಕಾಡತೊಡಗಿತು. ಅವು ಪರಸ್ಪರ

ಕಾದುತ್ತಿರುವಾಗ ಆ ತಿಮಿಂಗಲವು ತನ್ನ ಹೊಟ್ಟೆಯಲ್ಲಿರುವ ಪೆಟ್ಟಿಗೆಗೆ ಏನಾದರೂ ಅಪಾಯವಾದೀತೆಂದು ಯೋಚಿಸಿ ಆ ಪೆಟ್ಟಿಗೆಯನ್ನು ಹೊರಕ್ಕೆ ತೆಗೆದು ಬಂಡೆಯ ಮೇಲಿಟ್ಟು ಮರಳಿ ನೀರಿನೊಳಕ್ಕೆ ಧುಮಿಕಿ ತನ್ನ ವೈರಿಯೊಂದಿಗೆ ಹೋರಾಟಕ್ಕೆ ಹೋಯಿತು. ಆ ವೇಳೆಗೆ ಸರಿಯಾಗಿ ದಶರಥರಾಯನಿಗೆ ಬಲಗಣ್ಣು ಹಾರಿತು. ಆಗಲಾ ರಾಯನು ನನ್ನಂತಹ ಮಂದಭಾಗ್ಯನಿಗೆ ಈ ಶುಭಶಕುನವು ಯಾವ ಫಲವನ್ನು ತಾನೇ ಕೊಡಬಲ್ಲದು? ಈಶ್ವರ ವಿಲಾಸವು ಹೇಗಿರುವುದೋ ನೋಡಬೇಕೆಂದು ಯೋಚಿಸುತ್ತಿರುವಲ್ಲಿ ದೈವಾಜ್ಞೆಯಿಂದ ಆ ಪೆಟ್ಟಿಗೆಯ ಮುಚ್ಚಳವು ಥಟ್ಟನೆ ತೆರೆಯಲ್ಪಟ್ಟಿತು. ಅದರೊಳಗೆ ಕುಳಿತಿದ್ದ ಕೌಸಲ್ಯಾದೇವಿಯು ಈ ಸುಂದರಾಂಗನನ್ನು ನೋಡಿ ಧಿಗ್ಗನೆ ಎದ್ದು ನಿಂತು ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡು ಸ್ವಲ್ಪ ಹೊತ್ತಿನ ತರುವಾಯ ಮೌನವನ್ನು ಬಿಟ್ಟು ತನ್ನ ವೃತ್ತಾಂತವನ್ನು ವಿವರಿಸಿದಳು. ಅವರಿಬ್ಬರೂ ಪರಸ್ಪರಾನುರಾಗಯುಕ್ತರಾಗಿ ಮುಂದಿನ ಕರ್ತವ್ಯವನ್ನರಿಯದೆ ವಿಮೂಢರಾಗಿ ಚಿಂತಿಸುತ್ತಿದ್ದರು.

ಬ್ರಹ್ಮೇಂದ್ರಾದಿಗಳು ರಾವಣನ ಮಾಯವನ್ನೂ ದಶರಥನು ಅಲ್ಲಿಗೆ ಬಂದುದನ್ನೂ ತಿಳಿದುಕೊಂಡು ದೇವಕನ್ಯೆಯರೊಂದಿರೆ ಅಲ್ಲಿಗೆ ಬಂದು ತಾವು ನಿಶ್ಚಯಿಸಿದ್ದ ಶುಭಲಗ್ನದಲ್ಲಿಯೇ ಇವರಿಬ್ಬರಿಗೂ ವೈದಿಕವಿಧಾನದಿಂದ ವಿವಾಹಕಾರ್ಯವನ್ನು ನೆರವೇರಿಸಿ, ಮಂಗಳಾಶೀರ್ವಚನಗಳನ್ನು ಹೇಳಿ ನೀವು ಭಯಪಡದೆ ಈ ಮಂದಾಸನದಲ್ಲಿಯೇ ಕುಳಿತಿರಿ, ನಿಮಗೆ ಯಾವವಿಪತ್ತೂ ಬರಲರಿಯದು, ಸ್ವಲ್ಪಕಾಲದಲ್ಲಿಯೇ ನೀವು ಬಂಧವಿಮುಕ್ತರಾಗಿ ನಿಮ್ಮ ದೇಶವನ್ನು ಸೇರುವಿರಿ. ಅಲ್ಲಿ ಅರವತ್ತು ನಾಲ್ಕು ಸಾವಿರ ವರ್ಷಗಳ ಪರ್ಯಂತ ಸೌಖ್ಯವಾಗಿ ಬಾಳುವಿರಿ, ಎಂದು ಹರಸಿ ಅಂತರ್ಧಾನವಾದರು. ಆಗಲಾದಂಪತಿಗಳೆದ್ದು ಭಯಮುಳಿದು ಪೆಟ್ಟಿಗೆಯೊಳಗೆ ಕುಳಿತುಕೊಂಡರು. ಒಡನೆ ಪೆಟ್ಟಿಗೆಯ ಮುಚ್ಚಳವು ಮೊದಲಿನಂತೆ ಮುಚ್ಚಿಕೊಂಡಿತು. ತಿಮಿಂಗಿಲವು ತನ್ನ ಹಗೆಯೊಡನೆ ಬಹಳ ಹೊತ್ತು ಹೋರಾಡಿ ಅದನ್ನೋಡಿಸಿ ಕಡೆಗೆ ಬಂದು ಎಂದಿನಂತೆ ಆ ಪೆಟ್ಟಿಗೆಯನ್ನು ನುಂಗಿ ಸಮುದ್ರದೊಳಗೆ ಹೋಗಿ ಸೇರಿಕೊಂಡಿತು.

---

## ೮ ನೆಯ ಪ್ರಕರಣ.

ಲಂಕಾಧಿಪತಿಯಾದ ರಾವಣನು ನಾರದ ಮಹರ್ಷಿಯು ಹೇಳಿದಂತೆ ಬ್ರಹ್ಮಾದಿದೇವತೆಗಳು ನಿಶ್ಚಯಮಾಡಿದ್ದ ಶುಭಲಗ್ನವನ್ನು ಲೆಕ್ಕಿಸುತ್ತಾ ಇದ್ದನು. ಆ ಅವಧಿಯು ಮುಗಿದು ಹೋದ ಕೂಡಲೆ ತನ್ನ ಆಸ್ಥಾನದಲ್ಲಿ ಇದ್ದ ಮಂತ್ರಿಗಳಲ್ಲಿ ಒಬ್ಬನನ್ನು ಕರೆದು ಸಮುದ್ರರಾಜನಿಗೆ ನನ್ನ ಅಪ್ಪಣೆಯನ್ನು ತಿಳಿಸಿ ಅವನಲ್ಲಿರಿಸಿದ್ದ ಪೆಟ್ಟಿಗೆಯೊಂದಿಗೆ ಅವನನ್ನು ಕರೆದುಕೊಂಡು ಬಾರೆಂದು ಹೇಳಿಕಳುಹಿದನು. ಆ ವೇಳೆಗೆ ಸರಿಯಾಗಿ ದೇವರ್ಷಿಯಾದ ನಾರದನು ರಾವಣನ ಸಭಾಸ್ಥಾನಕ್ಕೆ ಬಂದನು, ದಶಕಂಧರನು ಆತನಿಗೆ ನಮಸ್ಕರಿಸಿ–ಏನು ಸ್ವಾಮಿ! ದಕ್ಷಿಣ ಕೋಸಲದೇಶಕ್ಕೆ ಹೋಗಿದ್ದೀರಾ? ನಿಮ್ಮ ಶುಭಮುಹೂರ್ತದಲ್ಲಿ ವಿವಾಹವಾಯಿತೆ? ನೀವಲ್ಲಿ ಹೋಗಿದ್ದಿರೊ? ಹೀ! ಹೀ! ಹೀ! ಎಂದು ಹಾಸ್ಯಮಾಡತೊಡಗಿದನು. ಅಷ್ಟರಲ್ಲಿ ಸಮುದ್ರರಾಜನು ಪೆಟ್ಟಿಗೆಯನ್ನು ಹೊರಿಸಿಕೊಂಡು ಬಂದು ಆತನ ಮುಂದೆ ಇರಿಸಿದನು. ರಾವಣನು ಬಹು ಸಂಭ್ರಮದಿಂದ ಅದರ ಬೀಗವನ್ನು ತೆರೆದು ತೆರೆದು ನೋಡಿದನು. ಅದರಲ್ಲಿ ಕೌಸಲ್ಯಾ ದಶರಥರು ಹಸನ್ಮುಖಿಗಳಾಗಿ ಕುಳಿತ್ತಿದ್ದರು. ಆಗಲಾರಾವಣನು ಆಶ್ಚರ್ಯ ಕೋಪ ಸಂಭ್ರಮಗಳಿಂದ ಭ್ರಾಂತನಾಗಿ ಹಲ್ಲು ಕಡಿಯುತ್ತಾ, ಹುಬ್ಬುಗಂಟುಹಾಕಿಕೊಂಡು, ಸಮುದ್ರರಾಜನನ್ನು ನೋಡಿ, ಛೀ ನೀಚಾ! ನಿನಗೆ ಜ್ಞಾನವಿದೆಯೆ? ಜಡಾಶಯನೆಂಬ ಹೆಸರನ್ನು ಸಾರ್ಥಕಗೊಳಿಸಿದೆಯಾ? ಗರ್ವಿಷ್ಠನಾದ ನೀನು ನನಗೆ ಮೋಸಮಾಡಬೇಕೆಂದು ಎಷ್ಟು ದಿನಗಳಿಂದ ಆಲೋಚಿಸಿಕೊಂಡಿದ್ದೆ? ಎಲಾದುರಾತ್ಮಾ! ದ್ರೋಹಿಯೇ ನಿನ್ನನೀಕ್ಷಣದಲ್ಲಿಯೇ ಈ ಚಂದ್ರಹಾಸದಿಂದ ತರಿದು ಭೂತಗಳಿಗೆ ಬಲಿಕೊಡುವೆನು. ನೋಡೆಂದು ಕತ್ತಿಯನ್ನೆತ್ತಲು ಆ ಸಮುದ್ರರಾಜನು ವಿನಯ ಭಯಗಳಿಂದ ಕೈ ಮುಗಿದು, "ಎಲೈ ನಿಶಾಚರಾಧೀಶ್ವರಾ, ನಾನು ನಿನ್ನ ಆಜ್ಞೆಯನ್ನೆಂದಿಗೂ ಮೀರತಕ್ಕವನಲ್ಲ. ನೀನು ಈ ಪೆಟ್ಟಿಗೆಯಲ್ಲಿ ಏನನ್ನಿಟ್ಟದ್ದೆಯೆಂಬುದೇ ನನಗೆ ತಿಳಿಯದು. ಜತನವಾಗಿ ಇದನ್ನಿಟ್ಟಿರಬೇಕೆಂದು ನಿನ್ನ ಅಪ್ಪಣೆಯಾದುದರಿಂದ ಇದನ್ನು ಒಂದು ಮಹಾ ಮೀನಿನ ವಶಕ್ಕೆ ಕೊಟ್ಟು, ಬಲು ಜೋಪಾನವಾಗಿ ನೋಡಿಕೊಂಡಿರುವಂತೆ ಕಟ್ಟು ಮಾಡಿದ್ದೆನು. ಈಗ ನಿನ್ನ ಅಪ್ಪಣೆಯಂತೆ ಅದನ್ನು ತೆಗೆಯಿಸಿಕೊಂಡು ಬಂದೆನು. ನನ್ನಲ್ಲಿ ಲೇಶವಾದರೂ ವಂಚನೆಯಿಲ್ಲ. ಇಷ್ಟರಮೇಲೆ ನಿನ್ನ ಚಿತ್ತ, ನನ್ನ ಭಾಗ್ಯ, ಎಂದು ಹೇಳುವಷ್ಟರಲ್ಲಿ ನಾರದ ಮುನೀಶ್ವರನು ಅಡ್ಡವಾಗಿ ಬಂದು, "ಮಹಾರಾಜನೇ ಸೈರಿಸು. ಸೈರಿಸು. ಕಾರಣವಿಲ್ಲದೆ ನಿಕಾರಣವನ್ನು ವಿಧಿಸುವದು ಕಾರ್ಯವಲ್ಲ. ಈ ಸಮುದ್ರರಾಜನ ಮನವಿಯನ್ನು ಲಾಲಿಸತಕ್ಕದ್ದು. ಈತನು ಬಹುಕಾಲದಿಂದ ನಿನ್ನ ಆಜ್ಞಾಪಾಲಕನಾಗಿ ನಿನ್ನ ಪಟ್ಟಣಕ್ಕೆ ಅಗಳ್ತೆಯಂತೆ ಕಾಯ್ದುಕೊಂಡಿದ್ದು, ನಿನಗೆ ಯಾವಾಗಲೂ ಹಿತವನ್ನೇ ಬಯಸುತ್ತಿರುವನು. ಇವನು ದುರ್ನೀತಿಪರನಲ್ಲ. ನಿನಗೆ ವಂಚಿಸಬೇಕೆಂದು ಇವನು ಕರಣತ್ರಯದಿಂದಲೂ ಚಿಂತಿಸಿದವನಲ್ಲ. ಶರಣಪೆಂಬವರನ್ನು ರಕ್ಷಿಸತಕ್ಕದ್ದು ಶೂರರ ಧರ್ಮ. ಈ ಪೆಟ್ಟಿಗೆಯನ್ನು ರಕ್ಷಿಸಿಕೊಂಡಿದ್ದ ಮಹಾ ಮತ್ಸ್ಯವನ್ನು ಕರೆಯಿಸು. ಅದರ ವಿಚಾರವನ್ನು ತಿಳಿದುಕೊಂಡ ತರುವಾಯ ಅದನ್ನೇ ಶಿಕ್ಷಿಸಬಹುದು. "ಎಂದು ಹೇಳಿದನು. ಆಗ ರಾವಣನು ಸಮಾಧಾನ ಮಾಡಿಕೊಂಡು ಆ ಮಹಾ ಮೀನನನ್ನು ಕರೆಯಿಸಿ, ನಿಜಸ್ಥಿತಿಯನ್ನು ಇದ್ದಂತೆ ಹೇಳು, ತಪ್ಪಿದರೆ ನಿನ್ನ ತಲೆತರಿದು ಹಾಕುವೆನು ಎಂದು ಹೇಳಲಾ



Digitized by ROJA MUTHIAH RESEARCH LIBRARY

ತಿಮಿಂಗಿಲವು " ಎಲೈ ಮೂಜಗದೊಡೆಯಾ? ಸಮುದ್ರರಾಜನ ಆಜ್ಞಯಂತೆ ನಾನು
ಈ ಮಂದಾಸನವನ್ನು ನನ್ನ ಹೊಟ್ಟೆಯೊಳಗೆ ಅಡಗಿಸಿಕೊಂಡಿದ್ದೆನು. ಒಂದುದಿನ
ನನ್ನ ವೈರಿಯು ಬಂದು ನನ್ನನ್ನು ಕೆಣಕಿದುದರಿಂದ ಅದರೊಡನೆ ಹೋರಾಡುವಾಗ
ಈ ಪೆಟ್ಟಿಗೆಗೆ ಅಪಾಯ ಬಂದೀತೆಂದು ಹೆದರಿ, ಒಂದು ಮುಹೂರ್ತಕಾಲ ಮಾತ್ರ
ನನ್ನ ಹೊಟ್ಟೆಯಿಂದ ಹೊರಕ್ಕೆ ತೆಗೆದು ಒಂದು ಬಂಡೆಯ ಮೇಲಿರಿಸಿ ಶತ್ರುವಿನೊ
ಡನೆ ಕಾದಿ ಗೆಲ್ದು ಮರಳಿ ಈ ಪೆಟ್ಟಿಗೆಯನ್ನು ತೆಗೆದು ನುಂಗಿದೆನು. ಈಗ ರಾಜಾಜ್ಞೆ
ಯಾದುದರಿಂದ ಅದನ್ನು ತೆಗೆದು ಕೊಟ್ಟೆನು. ಇದನ್ನು ಯಾರ ವಶಕ್ಕೂ ಕೊಡಲಿಲ್ಲ.
ಇದರಲ್ಲಿ ಯಾವ ವಸ್ತು ಇಡಲ್ಪಟ್ಟಿತ್ತೆಂಬುದೇ ನನಗೆ ತಿಳಿಯದು. ಇದರ ಮೇಲೆ
ನನ್ನ ತಪ್ಪು ಏನಾದರೂ ಕಂಡುಬಂದರೆ ಮಹಾಸ್ವಾಮಿಯವರು ವಿಧಿಸುವ ಶಿಕ್ಷೆಗೆ
ಒಳಪಡುವೆನು." ಎಂದು ವಿನಯದಿಂದ ಶ್ರುತಪಡಿಸಿತು. ಆಗಲಾ ರಾವಣನು ಈ
ಮತ್ಸ್ಯವು ನಿರಫರಾಧಿ ಎಂದು ತಿಳಿದು ಕೋಪದಿಂದ ದಿಕ್ಕೇ ತೋರದೆ ಕೌಸಲ್ಯಾ
ದೇವಿಯು ಕಡೆಗೆ ತಿರುಗಿ " ಈ ಹೆಂಗಸಿನ ಹೊಟ್ಟೆಯಲ್ಲಿ ಹುಟ್ಟುವ ಮಗನು ನನ್ನನ್ನು
ಕೊಲ್ಲುವನೆಂದು ಕೇಳಿರುವೆನು. ಈಗಲೀ ದುರುಳೆಯನ್ನು ವಧಿಸಿದರೆ ಬ್ರಹ್ಮಲಿಖಿತವು
ಈಗಲೇ ಕೊನೆಗಾಣುವುದು." ಎಂದು ಹೇಳಿ ಅವಳನ್ನು ಕಡಿಯಬೇಕೆಂದು ಕತ್ತಿ
ಯನ್ನೆತ್ತಲು, ಅಷ್ಟರಲ್ಲಿ ಅವನ ತಮ್ಮನಾದ ವಿಭೀಷಣನು ಅಡ್ಡವಾಗಿ ಬಂದು
" ಅಣ್ಣಾ! ಸೈರಿಸು. ಪತಿವ್ರತಾ ಸ್ತ್ರೀಯರನ್ನು ಕೊಲ್ಲುವುದು ಮಹಾ ಪಾಪಕರವಲ್ಲವೆ?
ಶೂರರಾದವರು ಹೆಂಗೊಲೆಗೆ ಹೇಸದಿರುವರೆ? ಛೀ ಛೀ! ಇಂದ್ರಾದ್ಯಷ್ಟದಿಕ್ಪಾಲಕ
ರನ್ನು ಹೆದರಿಸಿ ಜಯವಂ ಕೊಂಡು ಹೆಸರುಪಡೆದ ಈ ಕತ್ತಿಯನ್ನು ಹೆಂಗಸಿನ ಮೇ
ಲೆ ಉಪಯೋಗಿಸಿ ನಿನ್ನ ಕೀರ್ತಿಯನ್ನು ಕಳೆದುಕೊಳ್ಳುವಿಯಾ? ಬಲಶಾಲಿಗಳಾದ
ದೇವದಾನವಪನ್ನಗಾದಿಗಳ ಮೇಲೆ ಉಪಯೋಗಿಸತಕ್ಕ ಈ ಕೃಪಾಣವನ್ನು ದೀನ
ಳಾದ ಅಬಲೆಯ ಮೇಲೆ ಪ್ರಯೋಗಿಸಬಹುದೇ? ಇವಳು ನಿನ್ನ ಮುಖವನ್ನೇ ಕಾಣ
ಳು. ನಿನಗೆ ಯಾವ ಅಪಕಾರವನ್ನೂ ಚಿಂತಿಸುವವಳಲ್ಲ. ಸ್ತ್ರೀಹತ್ಯವು ಪರಮದಾರು
ಣವಾದುದು. ಬ್ರಹ್ಮಕುಲದಲ್ಲಿ ಹುಟ್ಟಿ, ವೇದಾಧ್ಯಯನ ಸಂಪನ್ನನಾಗಿ, ಶೂರಾಗ್ರಣಿ
ಯಾಗಿರುವ ನಿನಗೆ ಇದು ತಕ್ಕದ್ದಲ್ಲ. ಮತ್ತೊಂದು ವಿಶೇಷವನ್ನು ಹೇಳುವೆನು ಕೇ
ಳು. ಇವರ ಲಗ್ನವನ್ನು ವಿಘ್ನಮಾಡುವೆನೆಂದು ನೀನು ಮಾಡಿದ ಪ್ರಯತ್ನವೇನಾ
ಯಿತು? ವಿಧಿಲಿಖಿತವನ್ನು ತಪ್ಪಿಸಲಹುದೆ? ಈಕೆಯ ಹೊಟ್ಟೆಯಲ್ಲಿ ಹುಟ್ಟಿದ ಮಗನು
ನಿನ್ನನ್ನು ಕೊಲ್ಲುವನೆಂದು ಕೇಳಿದ್ದೀಯೆ? ಇವಳನ್ನು ಈಗಲೇ ಕೊಲ್ಲಹೋದರೆ ವಿಷ್ಣುವು
ಈಗಲೇ ಹುಟ್ಟಿ ನಿನ್ನನ್ನೇಕೆ ಕೊಲ್ಲಬಾರದು? ಪೂರ್ವದ ನರಸಿಂಹನ ಚರಿತ್ರೆಯನ್ನು
ಕೇಳಿಲ್ಲವೇ? ಗಿಡವು ಯಾವಾಗಲೋ ಮೇಲೆ ಬೀಳುವುದೆಂದು ತಿಳಿದು ಈಗಲೇ
ಕಡಿದರೆ ಮೇಲೆ ಬೀಳದೆ ಇರುವುದೆ? ಅನರಣ್ಯನ ಶಾಪವನ್ನೂ ಸನತ್ಕುಮಾರನ ಉಪ
ದೇಶವನ್ನೂ ಕಪಿಲಮೂರ್ತಿಯ ವಾಕ್ಯಗಳನ್ನೂ ಸ್ಮರಿಸಿಕೊಂಡು ಶಾಂತಚಿತ್ತನಾ

Digitized by ROJA MUTHIAH RESEARCH LIBRARY



ಗಿರು. ಆಗತಕ್ಕದ್ದು ತಪ್ಪದೇ ಆಗಿಯೇ ತೀರುವದು." ಎಂದು ಸಂತೈಸಲಾ ರಾವ
ಣಾಸುರನು ನಿರುತ್ತರನಾಗಿ ದಂಡತಾಡಿತ ಭುಜಂಗದಂತೆ ನಿಟ್ಟುಸಿರು ಬಿಡುತ್ತಾ ಅವ
ರನ್ನು ಹೊರಡಿಸಿ ಬಿಡಿರೆಂದು ಆಜ್ಞಾಪಿಸಿ ದುಗುಡದಿಂದ ಅಂತ:ಪುರಕ್ಕೆ ಹೊರಟು
ಹೋದನು.

ಆಗ ಕೌಸಲ್ಯಾದಶರಥರು ಅಲ್ಲಿಂದ ಈಚೆಗೆ ಬಂದು ಅಗಾಧವಾದ ಸಮುದ್ರ
ವನ್ನು ಕಂಡು ಮನಸಿನಲ್ಲಿ ಹೆದರಿ ಓಹೋ! ಇದನ್ನು ದಾಟುವ ಬಗೆ ಹೇಗೆ? ಈ
ದ್ವೀಪವು ರಾಕ್ಷಸರಿಗೆ ಸೇರಿದುದು. ಇಲ್ಲಿ ಕ್ಷಣಕಾಲವೂ ನಿಲ್ಲಲಾಗದು. ಮುಂದೆ ಏನು
ಮಾಡೋಣ ಎಂದು ಚಿಂತಿಸುತ್ತಿರುವ ವೇಳೆಗೆ ಸರಿಯಾಗಿ ನಾರದ ಮುನೀಶ್ವರನು
ಅಲ್ಲಿಗೆ ಬಂದನು. ಅವರಿಬ್ಬರೂ ಆತನನ್ನು ನೋಡಿ ವಿನಯದಿಂದ ನಮಸ್ಕರಿಸಿ ಆ
ಮಹರ್ಷಿಯ ಆಶೀರ್ವಾದವನ್ನು ಪಡೆದು, ಮಹಾಸ್ವಾಮಿ! ತಮ್ಮ ದರ್ಶನದಿಂದ
ನಾವು ಧನ್ಯರಾದೆವು. ತಮ್ಮ ಕೃಪಾಬಲದಿಂದ ನಮಗೆ ಸಂಭವಿಸಿದ್ದ ವಿಪತ್ಪರಂಪರೆಗ
ಳೆಲ್ಲವೂ ಕೊನೆಗಂಡವು. ವೇಲಾವಲಯಿತ ಭೂಮಂಡಲೇಶ್ವರನಾಗಿದ್ದರೂ ತಮ್ಮಂತ
ಹ ಮಹಾನುಭಾವರಿಗೆ ಅರ್ಘ್ಯಪಾದ್ಯಾಚಮನೀಯಾದಿಗಳಿಂದ ಸತ್ಕರಿಸುವ ಭಾಗ್ಯವು
ನನಗೆ ಇಲ್ಲದೆ ಹೋಯಿತೆಂದು ವ್ಯಸನಪಡುತ್ತೇನೆ. ನನ್ನ ಸತ್ಕಾರವಿಲ್ಲದ ಮಾತ್ರ
ದಿಂದ ತಮಗೆ ಯಾವ ಕೊರತೆಯೂ ಇಲ್ಲವೆಂಬುದನ್ನು ನಾನು ಬಲ್ಲೆನು. ಆದರೂ
ನನ್ನ ಕರ್ತವ್ಯಲೋಪವು ದೋಷಾವಹವಲ್ಲವೇ? ಆದುದರಿಂದ ನನ್ನ ತಪ್ಪನ್ನು ದಯ
ಮಾಡಿ ಕ್ಷಮಿಸಿರಿ. ರಾಕ್ಷಸನ ಕೃತ್ಯವು ನಮ್ಮನ್ನೀ ದುರವಸ್ಥೆಗೆ ಒಳಗುಮಾಡಿತು.
ತಮ್ಮ ದರ್ಶನಮಾತ್ರದಿಂದ ಸಂಸಾರಘೋರಸಾಗರವನ್ನು ದಾಟುವುದೂ ಸುಲಭ
ವೆಂಬಲ್ಲಿ ಈ ಜಲನಿಧಿಯನ್ನು ದಾಟುವುದು ನಮಗೆ ಅಸಾಧ್ಯವೇ? ನಮ್ಮಲ್ಲಿ ಕರುಣೆ
ಯನ್ನಿಟ್ಟು ಈ ಸಮುದ್ರದಿಂದಾಚೆಗೆ ದಾಟುವ ಉಪಾಯವನ್ನನುಗ್ರಹಿಸಬೇಕೆಂದು
ಪ್ರಾರ್ಥಿಸಲಾ ಮಹರ್ಷಿಯು ಜಟಾಯುವೆಂಬ ಗೃಧ್ರರಾಜನನ್ನು ಧ್ಯಾನಿಸಿದನು.
ಕೂಡಲೇ ಆ ಪಕ್ಷಿಯು ಸನ್ನಿಹಿತನಾಗಲು ಅವನನ್ನು ದಶರಥರಾಜನಿಗೆ ತೋರಿಸಿ
ನಾರದನಿಂತೆಂದನು—

ಎಲೈ ದಶರಥಮಹಾರಾಜನೇ! ಈ ಲೋಕದಲ್ಲಿರುವ ಪಕ್ಷಿಜಾತಿಗಳಿಗೆಲ್ಲ ಈತ
ನು ಅಧೀಶ್ವರನು. ತುಂಬ ಬಲಶಾಲಿ. ಗರುಡಾನಿಲರಿಗೆ ಸಮಾನವಾದ ವೇಗವುಳ್ಳವ
ನು. ಸೂರ್ಯಸಾರಥಿಯಾದ ಅರುಣನ ಮಗನು. ಈತನಲ್ಲಿ ನೀನು ಮುಂದೆ ಯಾವಾ
ಗಲೂ ಪ್ರೇಮವುಳ್ಳವನಾಗಿ ಪೂರ್ಣ ಸ್ನೇಹದಿಂದ ಇರು. ಸೂರ್ಯಸಂಜಾತನಾದ
ನಿನಗೆ ಈ ಸೂರ್ಯಸಾರಥಿಯ ಮಗನೊಂದಿಗೆ ಸ್ನೇಹವು ಉಚಿತವಾದುದು. ಸವಯ
ಸ್ಕರಾದುದರಿಂದ ನಿಮ್ಮನ್ನೀತನು ನಿಮ್ಮ ಪಟ್ಟಣಕ್ಕೆ ನಿರಾಯಾಸವಾಗಿ ಸೇರಿಸುವನು,
ಎಂದು ಹೇಳಿ ಹೊರಟುಹೋದನು.

ತರುವಾಯ ಜಟಾಯುವು ಆ ದಂಪತಿಗಳನ್ನು ತನ್ನ ಹೆಗಲಮೇಲೆ ಏರಿಸಿಕೊಂಡು ವೇಗವಾಗಿ ಸಮುದ್ರವನ್ನು ದಾಟಿ ಅಯೋಧ್ಯಾಪುರವನ್ನು ಸೇರುವ ವೇಳೆಗೆ ರಾತ್ರಿ ಮೂರು ಯಾಮಗಳಾಗಿ ಹೋಗಿತ್ತು. ಆ ವೇಳೆಯಲ್ಲಿ ಪಟ್ಟಣವನ್ನು ಪ್ರವೇಶಿಸುವುದು ಅನುಚಿತವೆಂದು ಯೋಚಿಸಿ ನಗರದ ಹತ್ತರವಿದ್ದ ಒಂದು ಉದ್ಯಾನವನದಲ್ಲಿಳಿದು ಜಟಾಯುವು ಸಜ್ಜುಗೊಳಿಸಿದ್ದ ಪತ್ರಾಸ್ತರಣದಲ್ಲಿ ಕುಳಿತುಕೊಂಡು ತನ್ನ ಮಂತ್ರಿಯಾದ ಸುಮಂತನನ್ನು ಕರೆದುಕೊಂಡು ಬರಬೇಕೆಂದು ಹೇಳಿ ಆ ಜಟಾಯುವನ್ನು ಕಳುಹಿದನು.

ಅತ್ತ ದೊರೆಯ ಪರಿವಾರದವರು ಸರಯೂ ತೀರದಲ್ಲಿರುವಾಗ ಮಳೆಯೂ ಗಾಳಿಯೂ ನಿಂತಕೂಡಲೇ ಕತ್ತಲೆ ಹೋಗಿ ಬೆಳಗಾಯಿತು. ತಮ್ಮೊಡೆಯನ ದೋಣಿ ಏನಾಯಿತೋ! ಆತನು ಎತ್ತ ಹೋದನೋ ಗೊತ್ತಾಗದೆ ಆತನ ಮಂತ್ರಿಸತ್ತಮರು ಶೋಕಾಕುಲಿತ ಚಿತ್ತರಾಗಿ ಅಯ್ಯೋ! ಹೇಳುವವರಿಲ್ಲವಲ್ಲ; ಎಂದು ಪ್ರಲಾಪಿಸುತ್ತಾ ವಸಿಷ್ಠಮುನಿಯ ಬಳಿಗೆ ಬಂದು ಕೈಮುಗಿದು, ಮುನಿವರ್ಯನೇ! ನಮ್ಮ ಪ್ರಭುವು ಏನಾದನೆಂಬುದು ತಿಳಿಯಲಿಲ್ಲ. ಝಂಝಾವಾತದಲ್ಲಿ ಸಿಕ್ಕಿ ಎಲ್ಲಿಗೆ ಹೊಡೆದುಕೊಂಡು ಹೋದನೋ ಈಗ ನಾವು ಏನು ಮಾಡತಕ್ಕದೆಂಬುದನ್ನು ತಿಳಿದು ಹೇಳಿರಿ. ತಮ್ಮಾಜ್ಞೆಯನ್ನು ಶಿರಸಾವಹಿಸಲು ಸಿದ್ಧರಾಗಿರುವೆವು, ಎಂದು ಬೇಡಿಕೊಳ್ಳಲಾ ಮುನೀಂದ್ರನು ಸ್ವಲ್ಪಹೊತ್ತಿನ ತನಕ ಆಲೋಚನೆ ಮಾಡಿ ಅವರನ್ನು ಕುರಿತು "ಮಂತ್ರಿಸತ್ತಮರೇ! ಸ್ವಲ್ಪ ಕಾಲ ಸೈರಿಸಿರಿ. ನೀವು ಮಹಾರಾಜನ ಕಾಣದೆ ಹೋಗಿರುವ ವರ್ತಮಾನವನ್ನು ಬಹಿರಂಗ ಪಡಿಸದೆ ಗುಟ್ಟಾಗಿಟ್ಟು ರಾಜ್ಯಪರಿಪಾಲನೆ ಮಾಡುತ್ತಾ ಬನ್ನಿರಿ. ಅಲ್ಲಲ್ಲಿಗೆ ಗೂಢಾಚಾರರನ್ನು ಕಳುಹಿ ಸಮಾಚಾರಗಳನ್ನು ತರೆಸಿಕೊಳ್ಳಿರಿ. ಮಹಾರಾಜನು ಎಂಟು ದಿನಗಳಲ್ಲಿ ತಪ್ಪದೆ ಬರುವನು." ಎಂದು ಹೇಳಿ ಅವರನ್ನೆಲ್ಲಾ ಹಿಂದಕ್ಕೆ ಕರೆದುಕೊಂಡು ಬಂದು ಅಯೋಧ್ಯಾಪುರಿಯನ್ನು ಸೇರಿಸಿದನು.

ಮಂತ್ರಿಯಾದ ಸುಮಂತನು ದಶರಥರಾಯನನ್ನು ನೆನೆದು ಚಿಂತಿಸುತ್ತಾ ವಸಿಷ್ಠನು ಹೇಳಿದ ದಿನಗಳ ಅವಧಿಯನ್ನು ಲೆಕ್ಕಮಾಡುತ್ತಾ ನಿದ್ರಾಹಾರಗಳನ್ನುಳಿದು ವಿಚಾರಮಗ್ನನಾಗಿ ಕಾಲಕಳಿಯುತ್ತಿರುವಲ್ಲಿ ಎಂಟನೆಯ ದಿನ ರಾತ್ರಿ ನಿದ್ರೆಹೋಗದೆ ಹಾಸಿಗೆಯ ಮೇಲೆ ಹೊರಳಾಡುತ್ತಾ ಸ್ವಲ್ಪ ಕಣ್ಣು ಮುಚ್ಚುವಷ್ಟರಲ್ಲಿ ಜಟಾಯುವು ಬಂದು ಬಾಗಿಲನ್ನು ಕಟ್ಟಲು, ಧಿಗ್ಗನೆ ಎಚ್ಚತ್ತು ಹೊರಗೆ ಬಂದು ನೋಡಿ ಗಾಬರಿಗೊಂಡು ನೀನು ಯಾರಯ್ಯಾ? ಎಂದು ಕೇಳಲು ಆತನು ತನ್ನ ವೃತ್ತಾಂತವನ್ನೂ ಕೌಸಲ್ಯಾದಶರಥರು ಊರ ಹೊರಗಣ ಉದ್ಯಾನವನದಲ್ಲಿ ಬಂದಿಳಿದಿರುವುದನ್ನೂ ವಿವರಿಸಲಾ ಸುಮಂತನು ಆನಂದ ಪರವಶನಾಗಿ ತತ್‌ಕ್ಷವೇ ಹೊರಟು ಮಹಾರಾ

Digitized by ROJA MUTHIAH RESEARCH LIBRARY



ಜನ ಬಳಿಗೆ ಹೋಗಿ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಎನ್ನೊಡೆಯಾ! ವಿಪತ್ತಿನಿಂದ ಬಿಡುಗಡೆ ಹೊಂದಿ ಹೇಗೆ ಈಚೆಗೆ ಬಂದೆ ಎಂದು ಕೇಳಲಾ ದಶರಥನು ಪ್ರಿಯ ಮಂತ್ರಿಯನ್ನಪ್ಪಿಕೊಂಡು ಸಂತೈಸಿ ನಡೆದ ಸಂಗತಿಗನ್ನೆಲ್ಲಾ ಆ ಮೂಲಾಗ್ರವಾಗಿ ವಿವರಿಸಿದನು. ತರುವಾಯ ಮಹಾರಾಜನು ಪುರಜನರಿಗೆ ವರ್ತಮಾನವನ್ನು ಕೊಡಲು ಅವರು ಬಹು ಸಂತೋಷದಿಂದ ತಮ್ಮ ಮನೆ ಬಾಗಿಲುಗಳನ್ನು ಅಲಂಕರಿಸಿ ವಿವಿಧವಾದ್ಯಗಳೊಡನೆ ಹೊರಟು ತಮ್ಮ ಮಹಾರಾಜನನ್ನು ಕಂಡು ವಂದಿಸಿ, ಪತ್ನೀಸಹಿತನಾದ ಆತನನ್ನು ಸಂಭ್ರಮದಿಂದ ಕರೆದುಕೊಂಡು ಬಂದು ಅರಮನೆಯನ್ನು ಪ್ರವೇಶಮಾಡಿಸಿದನು. ಬಳಿಕ ದೂತರು ದಕ್ಷಿಣಕೋಸಲೇಂದ್ರನಿಗೆ ವರ್ತಮಾನವನ್ನು ಹೇಳಲಾ ಭಾನುಮಂತನು ತನ್ನ ಮಗಳೂ ಅಳಿಯನೂ ಪ್ರಾಣದೊಂದಿಗೆ ಬಂದು ಸೇರಿದರೆಂಬ ಸುದ್ದಿಯನ್ನು ಕೇಳಿ ಅತ್ಯಾನಂದಗೊಂಡು ಪತ್ನೀ ಪುತ್ರಸಮೇತನಾಗಿ ಮಿತಪರಿವಾರದೊಂದಿಗೆ ಅಯೋಧ್ಯಾಪುರಿಗೆ ಬಂದು ಸೇರಿದನು. ತರುವಾಯ ವಿಧಿ ವಿಧಾನದಿಂದ ವಿವಾಹವನ್ನು ಬೆಳೆಯಿಸಿ ಬಹು ಸಂಭ್ರಮದಿಂದ ಇಂದಿಗೆ ನಾವು ಸನಾಥರಾದೆವೆಂದು ಸಂತೋಷ ಪಟ್ಟರು. ದಶರಥ ಮಹಾರಾಜನು ಆ ಮೇಲೆ ಬಹುಕಾಲದತನಕ ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಾ ಕೀರ್ತಿಯನ್ನು ಪಡೆದನು.

ನೀತಿವಿದರಕ್ಕೆ ಬಾಲರ್ ।
ಖ್ಯಾತಿಯಿನೀ ಕೃಷ್ಣರಾಜನಾಳ್ಗೆ ಸುಚಿರಂ ॥
ಚಾತುರ್ಯಂಪೆರ್ಚುಗೆ ಈ ।
ಭೂತಲದೊಳ್‌ಸೊಗದಿಮಿರ್ಕೆಸರ್ವರು ಮೆತ್ತಲ್ ॥

ಸಂಪೂರ್ಣ.

---

"ಶ್ರೀಮಹಾವೀರ" ಮುದ್ರಣಾಲಯ ಬೆಳಗಾಂವ.

ತ
ಕೊಂಡ
ಗೆ ರಾತ್ರಿ
ಪ್ರವೇಶಿ
ನವನದ
ತನ್ನ ವ
ಜಟಾಯ

ಅ
ಗಾಳಿಯ
ಣಿ ಏನ
ಮರು ಶ
ಸುತ್ತಾ
ವು ಏನ
ಕೊಂಡ
ತಮ್ಮಾಜ್ಞೆ
ಮುನೀಂ
“ ಪುತ್ರ
ಗಿರುವ
ಮಾಡುತ
ಸಿಕೊಳ್ಳಿ
ಹೇಳಿ ಅ
ಸೇರಿಸಿದ

ವ
ಷ್ಣನು
ವಿಚಾರ
ಹಾಸಿಗೆ
ಬಂದು
ಗೊಂಡ
ಕೌಸಲ
ವಿವರಿಸ



Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
| --- | --- |
| | |

ಲೇಖಕ: ಅಯ್ಯಂಗಾರ್ (ಕೆ ರಾಮ ಸ್ವಾಮಿ).

ಶಿರೋನಾಮೆ: ಕೌಸಲ್ಯಪರಿಣಯಂ.

ವ. ಸಂ: O.33,2IYA K

ಕ್ರ. ಸಂ: 293. N72

ಕ. ಸಾ. ಪ.

ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY